PAPERS LAID ON THE TABLE.

Statement of the Prime Minister on the formation of the Andhra State.

Sri A. G. RAMACHANDRA RAO (Minister for Law and Education).—Sir, I lay on the Table the Statement of the Prime Minister on the formation of the Andhra State. Copies of the statement will be distributed to the Members shortly.

Sri MULKA GOVINDA REDDY.—Will Wanchoo's report also be placed on the Table, Sir ?

Sri A. G. RAMACHANDRA RAO.—No ; only the statement of the Prime Minister.

MYSORE (PERSONAL AND MISCELLANEOUS) INAMS ABOLITION BILL, 1953.

Motion to consider—(contd.)

ಶ್ರೀ ಎಂ. ಲಿಂಗಣ್ಣ (ನಂಜನಗೂಡು).—ಸ್ವಾಮಿ, ಈ ಮಸೂದೆಯ ಸಂಬಂಧವಾಗಿ ಈಗಾಗಲೇ ಹಲವಾರು ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಈ ಮಸೂದೆಯ ಮೂಲ ತತ್ವಗಳಮೇಲೆ ವಿಪುಲವಾಗಿ ಚರ್ಚೆಗಳಾಗಿರುತ್ತವೆ. ಆ ಚರ್ಚೆಗಳಿಂದ ಒಂದು ಅಂಶ ಮಾತ್ರ ಎದ್ದುಕಾಣುತ್ತಿದೆ. ಸರ್ಕಾರದವರು ಈ ಜೋಡಿದಾರರ ಮತ್ತು ಇನಾಂದಾರರ ಭೂಮಿಗಳನ್ನು ಸರ್ಕಾರಕ್ಕೆ ವಶಪಡಿಸಿಕೊಳ್ಳುವುದರಲ್ಲಿ ಯಾರದೂ ಭಿನ್ನಾಭಿಪ್ರಾಯ ಅಥವಾ ಅಭ್ಯಂತರವಿದ್ದ ಹಾಗೆ ಕಾಣಲಿಲ್ಲ. ಆದರೆ ಕೆಲವು ಮಾನ್ಯ ಸದಸ್ಯರು ಈ ಸಭೆಯಲ್ಲಿ ಈ ಬಿಲ್ಲನ್ನು ವಿರೋಧಿಸಿದ್ದಾರೆ. ಆದರೆ ಅವರು ಹಾಗೆ ವಿರೋಧಿಸಿರುವುದರ ಉದ್ದೇಶವೇನೆಂದರೆ, ಈಗ ಈ ಬಿಲ್ಲು ಈ ಸಭೆಯಮುಂದೆ ಯಾವ ರೀತಿಯಲ್ಲಿ ಬಂದಿರುತ್ತದೆಯೋ ಆ ರೀತಿಯಲ್ಲಿ ಇದನ್ನು ಅಂಗೀಕರಿಸಲು ಸಾಧ್ಯವಿಲ್ಲ ಎಂಬ ಒಂದು ಕಾರಣದಿಂದ ಹಾಗೆ ವಿರೋಧಿಸಿದ್ದಾರೆಯೇ ಶಿವಾಯಿ ಅವರಿಗೂ ಕೂಡ ಈ ಜೋಡಿ, ಜಹಗೀರುಗಳು ರದ್ದಾಗಬೇಕೆಂಬ ಅಭಿಪ್ರಾಯವಿರುತ್ತದೆಯೆಂದು ನಾನು ಭಾವಿಸಿದ್ದೇನೆ. ಆದರೆ ಈಗ ಈ ಬಿಲ್ಲಿನಮೇಲೆ ಚರ್ಚೆಯಾಗತಕ್ಕ ಅಂಶಗಳ ಜೊತೆಗೆ ಇನ್ನೂ ಏನೇನು ಅಂಶಗಳನ್ನು ಮುಂದೆ ತರತಕ್ಕ ಮಸೂದೆಯಲ್ಲಿ ಅಡಕಮಾಡಬೇಕಾಗಿರುತ್ತದೆಂಬ ವಿಚಾರದಲ್ಲಿ ನಾನೀಗ ನನ್ನ ಅಭಿಪ್ರಾಯಗಳನ್ನು ಸೂಚಿಸಲಿಚ್ಛಿಸುತ್ತೇನೆ.

ಒಂದನೆಯದಾಗಿ, ಇಲ್ಲಿಯವರೆಗೂ ಏನು ಒಬ್ಬ ವ್ಯಕ್ತಿ ಅವನು ಕಾನೂನು ಪ್ರಕಾರ ಎಷ್ಟು ಜಮೀನನ್ನು ಬೇಕಾದರೂ ಹೊಂದುವುದಕ್ಕೂ ಮತ್ತು ಅಂಥ ಜಮೀನನ್ನು ತನ್ನ ಅಧಿಕಾರದಲ್ಲಿಟ್ಟುಕೊಂಡು ಆತನು ಅನುಭವಿಸುವುದಕ್ಕೂ ಒಂದು ಹಕ್ಕನ್ನು ಪಡೆದಿದ್ದಾನೆ. ಇದೇ ರೀತಿ ಜೋಡೀದಾರರಿಗೂ ಮತ್ತು ಇನಾಂದಾರರಿಗೂ ಒಂದು ಹಕ್ಕು ಇದ್ದೇ ಇದೆ. ಈಗ ಈ ಮಸೂದೆಯಲ್ಲಿ ವ್ಯಕ್ತಪಡಿಸಿರತಕ್ಕ ಪ್ರಕಾರ ನಾವು ಈ ದಿವಸ ಆ ಜೋಡಿದಾರರ ಮತ್ತು ಇನಾಂದಾರರ ಆಸ್ತಿಯಮೇಲಿರತಕ್ಕ ಹಕ್ಕನ್ನು ಹರಣಮಾಡುವ ಸಂದರ್ಭದಲ್ಲಿದ್ದೇವೆ. ಈಗ ಆಚರಣೆಯಲ್ಲಿರತಕ್ಕ ನಮ್ಮ ರಾಜ್ಯಾಂಗದ ವಿಧಿಗನುಗುಣವಾಗಿ ಯಾರಾದರೊಬ್ಬ ಖಾಸಗಿ ಮನುಷ್ಯನಿಗೆ ಸೇರಿರತಕ್ಕಂಥ ಆಸ್ತಿಯನ್ನು ದೇಶಕ್ಕೆ ಅಥವಾ ಸಾರ್ವಜನಿಕರಿಗೆ ಒಂದು ಅನುಕೂಲ ಕಲ್ಪಿಸಬೇಕೆಂಬ ದೃಷ್ಟಿಯಿಂದ ಆತನ ಹಕ್ಕಿನಿಂದ ತಪ್ಪಿಸಿ ಕಿತ್ತುಕೊಳ್ಳತಕ್ಕ ಸಂದರ್ಭದಲ್ಲಿ ಅಂಥ ಆಸ್ತಿಗೆ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕಾಗಿದ್ದಾಗ ಅದಕ್ಕೆ ಪರಿಹಾರ ಕೊಟ್ಟು ಅದನ್ನು ತೆಗೆದುಕೊಳ್ಳಬೇಕೆಂದು ಒಂದು ವಿಧಾಯಕ ಮಾಡಲಾಗಿದೆ. ಆದರೆ ತಾವೂ ಸಹ ಈ ದಿವಸ ಈ ಬಿಲ್ಲನ್ನು ಇಡೀ ದೇಶದ ಹಿತಬಯಸುವುದಕ್ಕಾಗಿ ನಮ್ಮ ಮುಂದೆ ಮಂಡಿಸಿದ್ದರೆ ನಾನು ಇದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈಗಾಗಲೆ ಅನೇಕ ಮಾನ್ಯ ಮಿತ್ರರು ಮಾತನಾಡುತ್ತಿರುವಾಗ ಅವರು ಸೂಚಿಸಿದ ಅಭಿಪ್ರಾಯಗಳ ಬಗ್ಗೆ ಶ್ರೀ ವಿ. ವೆಂಕಟಪ್ಪನವರು ಸೂಚಿಸಿರುವ ಪ್ರಕಾರ ಜೋಡಿ ಮತ್ತು ಇನಾಂದಾರರುಗಳ ವಿಷಯದಲ್ಲಿ ಅಷ್ಟು ಲಘುವಾಗಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು ಸರಿಯಿಲ್ಲವೆಂದೇ ನನ್ನ ಭಾವನೆಯೂ ಕೂಡ. ಈ ಜೋಡೀದಾರರಿಗೂ ಮತ್ತು ಇನಾಂದಾರರಿಗೂ ಯಾವುದೋ ಒಂದು ಕಾಲದಲ್ಲಿ ಅವರು ಯಾವುದೋ ಒಂದು ಮಹತ್ತರವಾದ ಸೇವೆಯನ್ನು ದೇಶಕ್ಕೆ ಸಲ್ಲಿಸಿರುವುದರಿಂದ ಅವರಿಗೆ ಆ ಇನಾಂತಿಗಳನ್ನು ಕೊಡಲಾಗಿದೆಯೇ ಹೊರತು, ಯಾವುದೋ ಒಂದು ಕಾರಣಕ್ಕೆ, ಯಾವುದೋ ಒಂದು ಕಾಲದಲ್ಲಿ, ಯಾರೋ ಒಬ್ಬರು ಹಾಗೆ ಕೊಟ್ಟಿರತಕ್ಕಂಥ ಇನಾಂತಿಗಳಾಗಿರುತ್ತದೆಯೆಂದು ಅಷ್ಟು ಲಘುವಾಗಿ ಮಾತನಾಡತಕ್ಕದ್ದು ಸರಿಯಿಲ್ಲ. ಒಂದುವೇಳೆ ಅವರು ದೇಶದ ಹಿತದೃಷ್ಟಿಯಲ್ಲಿ ಅಷ್ಟು ಅನುಕೂಲವಾದ ಕೆಲಸಗಳನ್ನು ಅವರು ಮಾಡಲಿಲ್ಲವೆಂಬ ಒಂದು ಕಾರಣದ ಮೇಲೆ ಅವರನ್ನು ಅಲ್ಲಗಳೆಯುವುದು ಸರಿಯಲ್ಲ.

ಈ ಮಸೂದೆಯಲ್ಲಿ ರಿಲಿಜಿಯಸ್ ಎಂಡೋಮೆಂಟ್‌ಗಳಿಗೂ ಮತ್ತು ಸರ್ವಿಸ್ ಇನಾಂಗಳಿಗೂ ವಿನಾಯಿತಿಯನ್ನು ಕೊಡಲಾಗಿದೆ. ಈ ವಿಚಾರವನ್ನೂ ಸಹ ತುಲನಮಾಡುತ್ತ, ಅನೇಕ ಮಿತ್ರರು ಅವರ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಶೃಂಗೇರಿ ಬಹಳ ಹಿಂದಿನಿಂದಲೂ ಬಂದಂಥ ಸಂಸ್ಥೆಯೆಂದೂ, ಅದಕ್ಕಾಗಿ ಈ ಸಂಸ್ಥೆಗೆ ಹಾಕಿಕೊಟ್ಟಿರುವ ಇನಾಂ ಜಮೀನುಗಳನ್ನೂ ಮತ್ತು ಇದೇ ರೀತಿ ಇನ್ನೂ ಅನೇಕ ಮಠಗಳಿಗೆ ಸಂಬಂಧಪಟ್ಟ ಜಮೀನುಗಳನ್ನೂ ಸದ್ಯಕ್ಕೆ ಮುಟ್ಟುಗೋಲು ಹಾಕಿಕೊಳ್ಳದೆ, ಅವುಗಳಿಗೊಂದು ವಿನಾಯಿತಿಯನ್ನು ತೋರಿಸಲಾಗಿದೆ. ಇವುಗಳ ವಿಚಾರವನ್ನು ಮುಂದಕ್ಕೆ ನೋಡೋಣವೆಂದು ಹೇಳಿದ್ದಾರೆ. ಹೀಗೆ ಮಾಡಿರುವುದು ಬಹಳ ಸೂಕ್ತವಾಗಿದೆ ಮತ್ತು ಮುಂದಾಲೋಚನೆಯಿಂದ ಕೂಡಿದುದಾಗಿದೆ. ಆದರೆ ಈಗಾಗಲೇ ಇಡೀ ಹಿಂದೂಸ್ಥಾನದಲ್ಲಿ ಅನೇಕ ಪ್ರಾಂತಗಳಲ್ಲಿ ಈ ಭೂಸುಧಾರಣೆ ಜಾರಿಗೆ ಬಂದಿರುತ್ತದೆ. ಈ ಬಗ್ಗೆ ಅನೇಕ ಕಾನೂನುಗಳೂ ಈಗಾಗಲೇ ಜಾರಿಗೆ ಬಂದಿವೆ. ಮಧ್ಯಪ್ರದೇಶ, ಯುನೈಟೆಡ್ ಪ್ರಾವಿನ್ಸುಗಳಲ್ಲಿ ಈ ಜಮೀನ್‌ದಾರಿ ಪದ್ಧತಿಯನ್ನು ರದ್ದಿಯಾತಿಮಾಡತಕ್ಕ ಬಗ್ಗೆ ಒಂದು ಕಾನೂನನ್ನು ಜಾರಿಗೆ ತರಲಾಗಿದೆ. ಆದರೆ ಕಾಶ್ಮೀರದಲ್ಲೇ ಒಂದು ಉಗ್ರವಾದ ರೀತಿಯಲ್ಲಿ ಇದನ್ನು ಜಾರಿಗೆ ತರಲಾಗಿದೆ. ಕಾಶ್ಮೀರದಲ್ಲಿ ಮಾತ್ರ ಈ ಜಮೀನ್‌ದಾರಿ ಪದ್ಧತಿಯನ್ನು ಜಾರಿಗೆತರತಕ್ಕ ಸಂದರ್ಭದಲ್ಲಿ ಅವರಿಗೆ ಯಾವ ಕಾಂಪೆನ್‌ಸೇಷನ್ನನ್ನೂ

(ಶ್ರೀ ಎಂ. ಲಿಂಗಣ್ಣ)

ಕೊಡಬೇಕಾಗಿಲ್ಲವೆಂದು ಅವರು ಆ ಕಾನೂನಿನಲ್ಲಿ ಅಡಕ ಮಾಡಿರುತ್ತಾರೆ. ಆದರೆ ಭಾರತ ರಾಜ್ಯಾಂಗದಲ್ಲಿ ಹಾಗೆ ಸರ್ಕಾರ ತನ್ನ ಸುಪರ್ದಿಗೆ ಪಡಿಸಿಕೊಳ್ಳತಕ್ಕ ಇಂಥ ಸ್ವತ್ತುಗಳಿಗೆ ಒಂದು ಪರಿಹಾರ ಕೊಟ್ಟೇ ಕೊಡಬೇಕೆಂದು ವಿಧಾಯಕ ಮಾಡಲಾಗಿದೆ. ಕಾಶ್ಮೀರ ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿ ಇದ್ದಾಗ ಈ ವಿಚಾರಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಕವಾಡಲಾಗಿತ್ತು. ಆಗ ಆ ಸಮಿತಿಯವರು ಅನೇಕ ವಿಚಾರಗಳನ್ನು ವಿಮರ್ಶೆಮಾಡಿ ಕಡೆಗೆ ಈ ರೀತಿಯಾಗಿ ಯಾವ ಕಾಂಪೆನ್‌ಸೇಷನ್ನನ್ನು ಕೊಡಬೇಕಾದದ್ದು ಅನಾವಶ್ಯಕ ಎಂದು ಹೇಳಿದ್ದಾರೆ. ಆದರೆ ಹಾಗೆ ಪರಿಹಾರ ಕೊಡದೆ ಹೋದರೆ ಇಂಥ ಸಂದರ್ಭದಲ್ಲಿ ಸುಪ್ರೀಂ ಕೋರ್ಟಿನವರೆಗೂ ವಾದ ನಡೆಸಲು ಅವಕಾಶವಿರುತ್ತದೆಯೆಂದು ನನ್ನ ಭಾವನೆ. ಆದ್ದರಿಂದಲೇ ಸುಪ್ರೀಂ ಕೋರ್ಟಿನ ವ್ಯಾಪ್ತಿ ಕಾಶ್ಮೀರದಮೇಲೆ ಬೇಡವೆಂದು ಅವರು ತಿಳಿಸಿರುವುದು ಸಕಾರಣವಾಗಿದೆ. ಈ 'Land Compensation' ಸಮಿತಿಯವರು ಉಗ್ರವಾದಿಗಳಾಗಿದ್ದರೂ ಧರ್ಮಸಂಸ್ಥೆಗಳ ವಿಷಯದಲ್ಲಿ ಯಾವರೀತಿ ಅಗಿ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆ ಸಮಿತಿಯವರ ಅಭಿಪ್ರಾಯವನ್ನು ನಾನು ಈಗ ಇಲ್ಲಿ ತಮ್ಮ ಅನುಮತಿಪಡೆದು ಓದುತ್ತೇನೆ.

"We, however, feel that the interests of Religious Institutions as proprietors of land, should be safeguarded. We are aware of the services which are being rendered by most of these Institutions out of the income from lands to the cause of culture, education and human progress. As a result of the Abolition Law their income is sure to be reduced and many of their objects of social value and importance will become incapable of fulfilment.

During our investigation, this question of Religious Institutions has struck us as one of great social and public importance. We have realised that large masses of the State possess very strong sentiments and faith towards various institutions of this character. Besides some of these Institutions render considerable service and benefit to the general public. It would be both inexpedient and socially harmful if these facts are not taken due noitce of. It was not, however, possible for the Committee to go into necessary details of this question. That would by itself from a subject-matter of separate investigation, as the problem has far-reaching and serious implications and its solution will necessitate careful examination of all of them. In view of the importance of the questions, we respectfully recommend to the Constitutent Assembly the appointment of an *ad hoc* Committee which will examine and make recommendations for the maintenance and upkeep of such of the Religious Institutions in the State of Jammu and Kashmir as have been affected by the enforcement of the Abolition of Big Landed Estates Act, and whose continuance according to the recognised standards of public and social utility, would be necessary".

ಆ 'Land Compensation' ಸಮಿತಿಯವರು ಈ ಒಂದು ಅಭಿಪ್ರಾಯವನ್ನು ಇಂಥ ಒಂದು ತೀವ್ರಗಾಮಿಯಾದ ರೀತಿಯಲ್ಲಿ ಕೊಟ್ಟಿದ್ದಾರೆ. ಈ ಒಂದು ವಿಷಯವನ್ನು ನಾನು ಏತಕ್ಕಾಗಿ ಹೇಳಿದೆನೆಂದರೆ, ಈ ಮಸೂದೆಯನ್ನು ಮಂಡಿಸುವಾಗ ಮಾನ್ಯ ಮಂತ್ರಿಗಳು ರಿಲಿಜಿಯಸ್ ಇನಾಂಗಳ ಬಗ್ಗೆ ಇನ್ನೂ ಕೆಲವು ವಿಚಾರಗಳನ್ನು ಪರಿಶೀಲಿಸಿ, ಇನ್ನೂ ಕೆಲವು ದಿನಗಳಾದಮೇಲೆ ಅದಕ್ಕಾಗಿಯೆ ಬೇರೆ ಒಂದು ಮಸೂದೆಯನ್ನು ತರಬೇಕೆಂಬುದಾಗಿ ಅಭಿಪ್ರಾಯಪಟ್ಟಿದ್ದೇವೆ ಎಂದು ಹೇಳಿದ್ದರಿಂದ ನಾನು ಈ ವಿಷಯವನ್ನು ತಿಳಿಸಬೇಕಾಗಿ ಬಂತು.

ನನ್ನ ದೃಷ್ಟಿಯಲ್ಲಿ ಆ ಅಭಿಪ್ರಾಯ ಬಹಳಸಾಧುವಾದುದು. ಆದ್ದರಿಂದ ಈ ವಿಷಯವನ್ನು ನಾವು ಕೂಲಂಕಷವಾಗಿ ಯೋಚನೆ ಮಾಡುವುದಕ್ಕೆ ಒಂದು ಸಣ್ಣ ಆಡ್-ಹಾಕ್ ಕಮಿಟಿಯನ್ನು ಕೂಡ ಏರ್ಪಾಡುಮಾಡಿ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಈ ವಿಚಾರದಲ್ಲಿ ಯಾವರೀತಿ ಕಾನೂನು ಮಾಡಬೇಕೋ ಆ ರೀತಿ ಮಾಡುವುದು ಉಚಿತವೆಂದು ನನ್ನ ಭಾವನೆ ನನ್ನ ಅಭಿಪ್ರಾಯದಲ್ಲಿ Religious ಸಂಸ್ಥೆಗಳು. ಒಂದು ದೃಷ್ಟಿಯಲ್ಲಿ, ನನ್ನ ಮಿತ್ರರು ಹೇಳುವಂತೆ, ತಿರೋಗಾಮಿ ಸಂಸ್ಥೆಗಳೆಂದು ತಿಳಿದಿದ್ದರೂ ಕೂಡ, ಇನ್ನೊಂದು ದೃಷ್ಟಿಯಲ್ಲಿ ಅವು ಸಂಸ್ಕೃತಿಯ ಕೇಂದ್ರ ಸ್ಥಾನಗಳೆಂದೂ ತಿಳಿಯುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಯಾವ ಸಂಸ್ಕೃತಿ!

ಶ್ರೀ ಎಂ. ಲಿಂಗಣ್ಣ.—ನೀವು ಅರ್ಥಮಾಡಿಕೊಂಡಿರುವ ಸಂಸ್ಕೃತಿಯಲ್ಲ ಅದು.

Mr. SPEAKER.—Sri Linganna need not take notice of any interruption.

ಶ್ರೀ ಎಂ. ಲಿಂಗಣ್ಣ.—ನಿಜವಾಗಿಯೂ ಕೂಡ ಈ ಕೇಂದ್ರಗಳು ಸಂಸ್ಕೃತಿಯ ಹಿನ್ನೆಲೆಯಲ್ಲಿ ಬೆಳೆದಿವೆಯೆಂದು ನಾನು ಸಂತೋಷದಿಂದ ವ್ಯಕ್ತಪಡಿಸುತ್ತೇನೆ. ಯಾವವಿಧವಾದ ಸಂಸ್ಕೃತಿಯೆಂದು ನಮ್ಮ ಮಿತ್ರರು ಕೇಳಬಹುದು. ಅದಕ್ಕೆ ಉತ್ತರವನ್ನು ಅವರೇ ಹೇಳಿಕೊಳ್ಳಬೇಕು. ಏಕೆಂದರೆ ಈಗಾಗಲೇ 5 ಲಕ್ಷ ರೂಪಾ

ಯುಗಳು ಖರ್ಚುಹಾಕಿ ಸಂಸ್ಕೃತಿ ಪ್ರಚಾರ ಮಾಡಬೇಕು, ದೇಶದಲ್ಲಿ ಸಂಸ್ಕೃತಿಯು ಮಾಟ್ಟ ಕೆಳಗಿಳಿದಿವೆ, ಅದನ್ನು ಉನ್ನತಿಗೇರಿಸಬೇಕೆಂದು ಹೇಳುವಾಗ ಇಂಥ ಸಂಸ್ಕೃತಿಯ ಕೇಂದ್ರಗಳನ್ನು ತೆಗೆದುಹಾಕುವುದು ದೇಶದಲ್ಲಿ ಇವುಗಳ ವಿಷಯದಲ್ಲಿ ಈಗಿರುವ ಅಭಿಪ್ರಾಯ ಬದಲಾವಣೆ ಆಗುವುದಕ್ಕೆ ಅವಕಾಶವಾಗುತ್ತದೆ. ಲ್ಯಾಂಡ್‌ರಿಫಾರಮ್ಸ್ ಕಮಿಟಿಯವರು ಕೂಡ ಇದರ ವಿಷಯದಲ್ಲಿ ಏನು ಹೇಳಿದ್ದಾರೆಂದರೆ: ಜನತೆಯಲ್ಲಿ ಇಂಥ ಕೇಂದ್ರಗಳ ವಿಷಯದಲ್ಲಿ ಏನು ಒಂದು ಅಭಿಪ್ರಾಯ ಮೂಡಿದೆಯೋ ಆ ಅಭಿಪ್ರಾಯಗಳಿಗೆ ಇಂಥ ಕೇಂದ್ರಗಳನ್ನು ತೆಗೆದುಹಾಕುವುದರಿಂದ ಕೊಡಲಿ ಪೆಟ್ಟು ಬಿದ್ದಂತಾಗುತ್ತದೆ; ಜನರಿಗೆ ಈ ರೂಢಮೂಲವಾದ ಸಂಸ್ಕೃತಿಗಳಲ್ಲಿ ಅಚಲವಾದ ನಂಬಿಕೆಯಿದೆ, ಆ ನಂಬಿಕೆ ಕೆಟ್ಟುಹೋದರೆ ಸರ್ಕಾರದವರಮೇಲೆ ಅವರಿಗಿರುವ ನಂಬಿಕೆಯೂ ಹೋಗುತ್ತದೆಂದು ಹೇಳಿದ್ದಾರೆ. ಆ ದೃಷ್ಟಿಯಿಂದ ಅವರು ಈ ಧಾರ್ಮಿಕ ಸಂಸ್ಥೆಗಳು ಇರಬೇಕೆಂದು ಹೇಳಿದ್ದಾರೆ. ಅಂದ ಮಾತ್ರಕ್ಕೇ ನಾನೇನು ಈ ಸಂಸ್ಥೆಗಳನ್ನು ತೆಗೆಯಕೂಡದೆಂದು ಹೇಳುವುದಿಲ್ಲ. ಅಲ್ಲಿರುವ ಜನರಿಗೂ ಅನುಕೂಲವನ್ನು ಕಲ್ಪಿಸಿಕೊಟ್ಟು ಈ ಸಂಸ್ಥೆಗಳನ್ನು ಬೆಳೆಸಿಕೊಂಡು ಬರುವುದು ಪುರೋಗಾಮಿಯಾದ ಭೂಸುಧಾರಣೆಯೋ ಅಥವಾ ತಿರೋಗಾಮಿಯಾದದ್ದೋ ಎಂಬುದನ್ನು ನೀವೇ ಹೇಳಬಹುದು. ಈ ದೃಷ್ಟಿಯಲ್ಲಿ ಈ Exceptional Clauseನ ಮೂಲಕ Religious Institutionಗಳನ್ನು ಬಿಟ್ಟಿರುವುದು ಒಳ್ಳೆಯದೆಂದು ನನ್ನ ಭಾವನೆ.

ಇನ್ನು ಮೂರನೆಯದಾಗಿ, ಇನಾಂದಾರರುಗಳಿಗೆ ಮತ್ತು ಜೋಡಿದಾರರುಗಳಿಗೆ Compensation ಕೊಡತಕ್ಕ ವಿಷಯ: ನನ್ನ ದೃಷ್ಟಿಯಲ್ಲಿ ರಾಜ್ಯಾಂಗ ಅಡ್ಡಿಬರದೆ ಇದ್ದಿದ್ದರೆ ಈ ರೀತಿ Compensation ಕೊಡುವುದು ಅಷ್ಟು ಉಚಿತವಲ್ಲವೆಂದು ನಾನು ಹೇಳುತ್ತಿದ್ದೆ. ರಾಜ್ಯಾಂಗವಿಧಿಯಿಂದ ನಮಗೆ ಇಂದು ಕಾಂಪೆನ್ಸೇಷನ್ ಕೊಡುವುದು ಒಂದು ಕರ್ತವ್ಯವಾಗಿ ಪರಿಣಮಿಸಿರುವುದರಿಂದ ಇನಾಂದಾರರಿಗೆ Compensation ಕೊಡುವುದು ಅಗತ್ಯವಾಗಿದೆ. ಆದರೆ Compensation ನ್ನನ್ನು ಯಾವ ಮಟ್ಟದಲ್ಲಿ ಕೊಡಬೇಕೆಂಬುದನ್ನು ಈ ಸಂದರ್ಭದಲ್ಲಿ ಹೇಳಬಹುದಾಗಿದೆ. ಈ ಮಸೂದೆಯಲ್ಲಿ ಹೇಳಿರುವಂತೆ ಬೇಸಿಕ್ ಹಣ ಒಂದು ಸಾವಿರ ರೂಪಾಯಿಗಳಿಗೆ ಹೆಚ್ಚಿಗೆಯಿಲ್ಲದಿರುವ ಸಂದರ್ಭಗಳಲ್ಲಿ 25 ರಷ್ಟು, 1,000 ರೂಪಾಯಿಗಳಿಂದ 3,000 ರೂಪಾಯಿಗಳವರೆಗೆ ಬೇಸಿಕ್ income ಇರತಕ್ಕ ಗ್ರಾಮಗಳಿಗೆ 15 ರಷ್ಟು, 3,000 ರೂಪಾಯಿಗಳ ಮೇಲ್ಪಟ್ಟಿದ್ದರೆ ಹತ್ತರಷ್ಟನ್ನು ಕೊಡಬೇಕೆಂದು ಹೇಳಿದ್ದೀರಿ. ಆದರೆ ಇದೇ ವಿಷಯದಲ್ಲಿ ಮದ್ರಾಸಿನ Land Estates ಆಕ್ಟಿನಲ್ಲಾಗಲಿ, ಬೀಹಾರ, ಒರಿಸ್ಸಾ ಪ್ರಾಂತಗಳಲ್ಲಾಗಲಿ ಕೊಟ್ಟಿರುವ ಪರಿಹಾರದ ಮೊಬಲಗನ್ನು ನೋಡುವುದಾದರೆ, ಅಲ್ಲಿ ನಮಗಿಂತ ಕಡಮೆ ಕೊಟ್ಟಿದ್ದಾರೆ. ನಮ್ಮ ಭೂಸುಧಾರಣಾ ಸಮಿತಿಯಲ್ಲೂ ಕೂಡ ಇತರ ಅನೇಕ ಸಂಸ್ಥಾನಗಳಲ್ಲಿ ಕೊಟ್ಟಿದ್ದ Compensation ಮೊಬಲಗನ್ನೂ ಗಣನೆಗೆ ತೆಗೆದುಕೊಂಡು ತಮ್ಮ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಅಭಿಪ್ರಾಯವನ್ನು ತಾವು ಗಣನೆಗೆ ತೆಗೆದುಕೊಂಡರೂ ಕೂಡ ಒಟ್ಟಿನಲ್ಲಿ Compensation ಮೊಬಲಗನ್ನು ಕಡಮೆಮಾಡಬೇಕೆಂಬುದರಲ್ಲಿ ಅನುಮಾನವಿಲ್ಲ. ಪ್ರಕೃತ ಹಣಕಾಸಿನ ಪರಿಸ್ಥಿತಿಯಲ್ಲಿ ನಾವು ಅಷ್ಟು ಹಣವನ್ನು ಕೊಡುವುದಕ್ಕೆ ತಯಾರಾಗಿದ್ದೇವೆಯೋ ಅಥವಾ ನಮಗೆ ಶಕ್ತಿಯಿದೆಯೇ ಎಂಬುದು ಅನುಮಾನಾಸ್ಪದವಾಗಿದೆ. ಈ ದೃಷ್ಟಿಯಿಂದಲೂ ಇನಾಂದಾರರುಗಳಿಗೆ ಹೆಚ್ಚಿಗೆ Compensation ಕೊಡುವುದು ಸೂಕ್ತವಲ್ಲ ಅಲ್ಲದೆ, ಇನಾಂಗ್ರಾಮಗಳಲ್ಲಿ ಇನಾಂದಾರರುಗಳು ಅವುಗಳನ್ನು ಹೊಂದಿದ ಕಾಲದಿಂದ ಇದುವರೆಗೂ ಯಾವುದೊಂದು ಹೆಚ್ಚಿನ ಕೆಲಸಕಾರ್ಯಗಳನ್ನೂ ನಡೆಸಿಲ್ಲ. ಅಲ್ಲಿರತಕ್ಕ ಕೆರೆಕಟ್ಟೆಗಳೆಲ್ಲಾ ಹಾಳಾಗಿ ಹೋಗಿವೆ ಸ್ಕೂಲು ಆಸ್ಪತ್ರೆಗಳ ಸೌಲಭ್ಯ ಅಷ್ಟಾಗಿ ಇಲ್ಲವೆಂದೇ ನನ್ನ ಭಾವನೆ. ಇದೇ ಒಂದು ಭಾವನೆಯನ್ನು ಕೂಡ ಶ್ರೀ ಗುಂಡಪ್ಪಗೌಡರ ಕಮಿಟಿಯವರು ವ್ಯಕ್ತಪಡಿಸಿದ್ದಾರೆ. ಇನಾಂದಾರರುಗಳು ಇನಾಂ ಗ್ರಾಮಗಳಿಂದ ಬರುವ ಹುಟ್ಟುವಳಿಯನ್ನು ಹೊಂದುವ ಯೋಚನೆಯಲ್ಲಿದ್ದರೇ ಹೊರತು ಆ ಗ್ರಾಮಸ್ಥರಿಗೆ ಯಾವ ಸೌಲಭ್ಯಗಳನ್ನೂ ಮಾಡಿಕೊಡದಿದ್ದ ಮೇಲೆ ಅವರು ಈ ರೀತಿ ಹೆಚ್ಚಿಗೆ Compensation ಹೊಂದುವುದಕ್ಕೆ ಅರ್ಹರಲ್ಲ ಆ ದೃಷ್ಟಿಯಿಂದ ನಿಜವಾದ ತಕ್ಕಡಿಯಲ್ಲಿ ತೂಗಿ ಇವರಗಳಿಗೆ ಕೊಡಬೇಕಾದ Compensationನ್ನನ್ನು ಕಡಮೆಮಾಡಬೇಕೆಂದು ಹೇಳುತ್ತೇನೆ.

ಆಮೇಲೆ permanent tenants, Quasi-permanent tenants ಮತ್ತು ಖದೀಂ ಟೆನೆಂಟ್‌ಗಳಿಂದ ಪ್ರೀಮಿಯಂ ಮುಖೇನ ಹಣವನ್ನು ವಸೂಲುಮಾಡಬೇಕೆಂದು ಹೇಳಿದ್ದೀರಿ. ಮೊದಲನೆಯ ಟೆನೆಂಟಿನ ವಿಷಯದಲ್ಲಿ ಗುಂಡಪ್ಪಗೌಡರ ಕಮಿಟಿಯವರು ಕೊಟ್ಟಿರುವ ಅಭಿಪ್ರಾಯಕ್ಕೂ ನೀವು ಅವರ ವಿಷಯದಲ್ಲಿ ತೋರ್ಪಡಿಸಿರುವ ಅಭಿಪ್ರಾಯಕ್ಕೂ ವ್ಯತ್ಯಾಸವಿದೆ. ಅವರು ಅವರ ವಿಷಯದಲ್ಲಿ ಏನು ಹೇಳಿದ್ದಾರೆಂದರೆ:

Page 28 of the Report:

"So far as the Kadim tenant is concerned, the rent paid by him to the Inamdar is equal to the land revenue assessment and he will continue to pay the same assessment to Government. As there is neither an improvement in his status or rights nor a reduction in the amount to be paid by him after the acquisition of the village by Government, there appears to be no necessity to recover any premium from him for treating him as a 'registered occupant'."....

Sri KADIDAL MANJAPPA.—We have agreed with that report.

Sri M. LINGANNA.—

"....The rent payable by a permanent tenant to the Inamdar need not necessarily be equal to the assessment on the land and

(SRI M. LINGANNA).

though the tenancy is heritable it is not transferable without the consent of the Inamdar...."

Sri KADIDAL MANJAPPA.—We concede that we should pay some premium.

1 P.M.

ಶ್ರೀ ಎಂ. ಲಿಂಗಣ್ಣ.—ಪರ್ಮನೆಂಟ್ ಟೆನೆಂಟ್ಸ್ ಅಥವಾ ಖಾಯಂ ಟೆನೆಂಟ್ಸ್ ಆದರೂಕೂಡ, ಶ್ರೀಮಾನ್ ವೆಂಕಟಪ್ಪನವರು ಹೇಳಿದಹಾಗೆ, ಖದೀಂ ಟೆನೆಂಟ್ಸ್ ಎಂದು ಅರ್ಥವಿವರಣೆಯಲ್ಲಿಲ್ಲದೇಯಿದ್ದರೂ, ಇವರು ಮುಕ್ಕಾಲು ಪಾಲು ಖದೀಮ್ ಟೆನೆಂಟ್ಸಿನ ಅಂತಸ್ತಿಗೇ ಬರುತ್ತಾರೆ. ಈ ದೃಷ್ಟಿಯಿಂದಾದರೂ ಅವರಿಂದ ಪ್ರೀಮಿಯಮ್ ವಸೂಲುಮಾಡುವುದು ಸೂಕ್ತವಲ್ಲ. ಅಲ್ಲದೆ ಈ ಮಸೂದಾ ಕಾನೂನಿನಲ್ಲಿ ಜಮೀನಿನ ಮಾರ್ಕೆಟ್ ಬೆಲೆಯಲ್ಲಿ ಒಂದು ಶೇಕಡಾವಾರು ಕೊಡಬೇಕೆಂದು ಮಾಡಿರುವುದು ಸಾಧುವಲ್ಲ. ಕ್ವಾಸಿ ಪರ್ಮನೆಂಟ್ ಟೆನೆಂಟ್ಸ್‌ಗೂ ಕೂಡ ಏನು ಪ್ರೀಮಿಯಂ ಅವರು ಕೊಡಬೇಕೆಂದು ಗೊತ್ತುಮಾಡಿದ್ದಾರೋ ಅದು ನ್ಯಾಯಸಮ್ಮತವಲ್ಲವೆಂದು ನನ್ನ ಅಭಿಪ್ರಾಯ. ಇದು ಮೂಲಭೂತವಾದ ಪ್ರಶ್ನೆ. ಜೋಡಿ ಮತ್ತು ಇನಾಂದಾರರಿಗೆ ಕೊಡತಕ್ಕ ಪರಿಹಾರಕ್ಕೂ ರೈತರಿಂದ ವಸೂಲು ಮಾಡುವ ಪ್ರೀಮಿಯಮ್ಮಿಗೂ ಸಂಬಂಧವಿದೆ. ಜಾಸ್ತಿ ಪರಿಹಾರಕೊಡಬೇಕಾಗಿದ್ದರೆ ಜಾಸ್ತಿ ಪ್ರೀಮಿಯಂ ವಸೂಲು ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಪರಿಹಾರವನ್ನು ಕಡಮೆಕೊಟ್ಟರೆ ಒಳ್ಳೆಯದೆಂದು ಪ್ರೀಮಿಯಂ ಕಡಮೆ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯದಿಂದ ಸೂಚನೆ ಮಾಡುತ್ತೇನೆ.

ಇನ್ನು ಟೆನೆಂಟ್ಸ್ ಆಗಿ ರಿಜಿಸ್ಟರುಮಾಡುವ ಸಂಬಂಧದಲ್ಲಿ ಅನೇಕ ನ್ಯೂನಾತಿರೇಕಗಳಿವೆ. ತಮಗೆ ಗೊತ್ತಿರುವಹಾಗೆ ಇನಾಂ ಹಳ್ಳಿಗಳಲ್ಲಿ ಖದೀಂಟೆನೆಂಟ್ಸ್, ಪರ್ಮನೆಂಟ್ ಟೆನೆಂಟ್ಸ್ ಮತ್ತು ಕ್ವಾಸಿಪರ್ಮನೆಂಟ್ ಟೆನೆಂಟ್ಸ್ ಯಾರುಯಾರೆಂದು ನಿರ್ಧಾರ ಮಾಡುವುದು ಬಹಳ ಕಷ್ಟದ ಕೆಲಸ, ಆದುದರಿಂದ ಈ ಕಾನೂನು ಜಾರಿಯಾಗುವುದಕ್ಕಿಂತ ಮುಂಚೆಯೇ ಎಚ್ಚರಿಕೆಯನ್ನು ತೆಗೆದುಕೊಂಡು ಆಯಾ ಜಿಲ್ಲಾಧಿಕಾರಿಗಳಿಗೆ ಸರ್ಕ್ಯುಲರ್‌ಗಳ ಮೂಲಕ ಸೂಚನೆಕೊಟ್ಟು ಇನಾಂ ಗ್ರಾಮಗಳಲ್ಲಿರುವ ಟೆನೆಂಟ್ಸಿನ ನಿಜವಾದ ರೂಪರೇಖೆಗಳನ್ನು ಮೊಟ್ಟಮೊದಲೇ ಚಿತ್ರಿಸಿಕೊಂಡರೆ ಬಹಳ ಅನುಕೂಲವಾಗುತ್ತದೆ. ಏಕೆಂದರೆ ಆಗಲೇ ಅನೇಕ ಸದಸ್ಯರು ಹೇಳಿರುವಹಾಗೆ ಪರ್ಮನೆಂಟ್ ಟೆನೆಂಟ್ಸ್ ಮತ್ತು ಕ್ವಾಸಿಪರ್ಮನೆಂಟ್ ಟೆನೆಂಟ್ಸ್ ಇವರಲ್ಲಿ ಸರಿಯಾದ ಕಾಗದ ಪತ್ರಗಳಿರುವುದಿಲ್ಲವಾದುದರಿಂದ, ಈ ಸಮಸ್ಯೆಯನ್ನು ಬಿಡಿಸುವಾಗ ಬಹಳ ಕಷ್ಟಗಳು ಬರುತ್ತವೆ; ಈ ರೈತರನ್ನು ತೊಂದರೆಗೀಡು ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ, ಈ ವಿಷಯವನು ಸುಲಭವಾಗಿ ಬಗೆಹರಿಸಲು ಮುಂಜಾಗ್ರತೆ ಕಾರ್ಯಕ್ರಮಗಳನ್ನು ತೆಗೆದುಕೊಂಡು ಈ ಕಾನೂನು ಜಾರಿಗೆ ಬರುವುದಕ್ಕಿಂತ ಮುಂಚೆಯೇ ಆಯಾ ಜಿಲ್ಲಾಧಿಕಾರಿಗಳು ಒಂದೊಂದು ರಿಜಿಸ್ಟರನ್ನು ಮಾಡಿಕೊಂಡು ವಿಷಯ ಸಂಗ್ರಹಮಾಡಿ ಟೆನೆಂಟ್ಸ್ ವಿವರಗಳನ್ನೆಲ್ಲಾ ಬರೆದುಕೊಂಡರೆ ಈ ಕೆಲಸ ಸುಗಮವಾಗುತ್ತದೆ.

ಇನ್ನು ಟೆನೆಂಟ್ಸ್‌ಗಳು ಇಷ್ಟು ವರ್ಷದಲ್ಲಿ ಹಣವನ್ನು ಕೊಡಬೇಕೆಂದು ನಿರ್ಧಾರಮಾಡಲಾಗಿದೆ. ಸರ್ಕಾರದವರು ಮಾತ್ರ ಇನಾಂದಾರರಿಗೆ 12 ವರ್ಷಗಳಲ್ಲಿ ಪರಿಹಾರಕೊಡಬಹುದೆಂದು ನಿರ್ಧಾರಮಾಡಿದೆ. ರೈತರು ಐದು ವರ್ಷಗಳಲ್ಲಿ ಕೊಡಬೇಕೆಂದುಮಾಡಿದೆ. ಇದರಲ್ಲಿ ಒಂದು ಸರಿಯಾದ ತತ್ವ ಅಥವಾ ನೀತಿಯಿಲ್ಲ. ಸರ್ಕಾರ 12 ವರ್ಷಗಳಲ್ಲಿ ಕೊಟ್ಟಮೇಲೆ ರೈತರಿಗೂ 12 ವರ್ಷ ಮಾಡಬಹುದಾಗಿತ್ತೆಂದು ನನ್ನ ಅಭಿಪ್ರಾಯ. ಈ ದೃಷ್ಟಿಯಿಂದ, ಈ ಇನಾಮ್ ಮಸೂದೆ ನಿಜವಾಗಿ ನಾವು ಸ್ವಾಗತಿಸಬಹುದಾದ ಕಾನೂನಾದರೂ, ಅನೇಕ ನ್ಯೂನತೆಗಳು ಇದರಲ್ಲಿವೆ. ಇದನ್ನು ಸೆಲೆಕ್ಟ್ ಕಮಿಟಿಗೆ ಹಾಕುತ್ತೇವೆಂದು ಹೇಳಿದ್ದಾರೆ; ಅಲ್ಲಿ ಅನೇಕ ವಿಷಯಗಳು ಪರಿಗಣಿಸಲ್ಪಟ್ಟು ಪೂರ್ಣವಾದ ಒಂದು ಕಾನೂನನ್ನು ನಮ್ಮ ಮುಂದಿಡುತ್ತಾರೆಂದು ನಂಬಿ, ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

Sri M. RAJASEKHARA MURTHY (Yelandur).—Sir, it is with the greatest pleasure that I welcome this measure, which is undoubtedly a notable piece of legislation in the annals of Mysore. The basic principle underlying this Bill is to liberate the tiller of the soil from the autocracy and exploitation of the landlord, the abolition of the intermediaries between the tenant and the Government and to enable the ryot to enjoy the fruits of his labour in an atmosphere of perfect peace without any interference or fear. I am highly convinced of the laudable objects of this Bill. Coming from a constituency which is mostly consisting of inam villages, I am aware that the discontentment and dissatisfaction prevailing in those villages is mainly due to the negligence and indifference on the part of the big zamindars to the lawful demands of the tenants. In one sense, the zamindars have betrayed the trust reposed in them. In this connection I remember the advice given by Mahatma Gandhi, in the year 1934, in the course of the Harijan tour, at Kanpur when the deputation of the zamindars met him. He said :

> "It shall not be your object to amass huge material wealth to the exclusion of your tenants. Their labour and sweat have contributed towards such an accumulation. On the other hand, it shall be your duty to acquire spiritual wealth by your act of

benevolence and sacrifice towards the tenants. It entirely depends on you. You can be deprived of your material wealth at any moment. But nobody can rob you of spiritual wealth. My object is to enter into your heart and convert you so that you may hold the property in trust for the tenant who toils from morning till evening under the burning sun."

This was the advice of Mahatma Gandhi and this did not bring about any change in the mind of the landlords.

In the course of my tour of my constituency I have noticed that Inam villages are in the most backward condition when compared to the Government villages. Irrigation improvements are neglected; health, sanitation and educational facilities are too meagre. The ryots' condition is deplorable. Again, the tenants living in Inam villages are not enjoying the same status and privileges as those of a ryot in the Government villages. The Government financial aid, like the takavi loans, land improvement loans, etc., are not being extended to the ryots of the Inam villages. Another striking feature is that land in most of the Inam villages has lost its fertility. A considerable portion of the land has been left uncultivated. It is because, the Inamdar will be constantly changing his tenants at his whims and fancies. Naturally the tenant will have no security of tenure that he will continue to till the land even in the subsequent year and so he does not take any interest in the cultivation of the land or to use manure for the improvement of the land, etc. Another thing which must be remembered in this connection is that the existence of these Inams has brought in its train high competitive rates to the prejudice of the tenants, debts, slavery, low wages, germs of class warfare—all those social evils which we wish to avoid. It has created a kind of semi-serfdom, a type of social structure which existed during the medieval period in Great Britain, which of course is undesirable.

Sri KADIDAL MANJAPPA.—You come from the heart of Inam villages.

Sri M. RAJASEKHARA MURTHY.—Yes Sir. Most of the villages are Inam villages. It must be remembered in this connection that the existence of these Inam villages is a threat to democracy. The ryots there are getting politically conscious and now they are agitating for their rights also. The glorious Chinese revolution which has liberated seventeen crores of people within one year has inspired and influenced the peasants and now peasant movement is being promoted by the leftist propaganda. If you scrutinise the results of the general elections of Madras and Hyderabad, you will come to know that in those areas, where these zamindars have exploited and committed atrocities, the Communists have come out successfully. It reveals that these tenants seem to have pinned their positive faith in agrarian reforms promised by the Communist Party. Most of the tenants who were rendered homeless and landless have swelled the army of these landless labourers and have now fallen into Communist camps. Therefore, to eradicate all these evils which have grown up by the existence of these Inams, a legal injunction in hte form of the Abolition Bill is thus inevitable.

Now I come to certain provisions of this Bill. In the first place, this Bill is limited in its scope and it is not comprehensive enough as to include even the religious and service inams. The Government seems to have ignored the articles of the Constitution which prevent discrimination on the foundations of religious aspects. The Hon'ble Revenue Minister, Sri Kadidal Manjappa, in his eloquent and convincing speech on 20th March 1950, said like this:

"ಆದ್ದರಿಂದ ಏನು ವ್ಯಕ್ತವಾಗುತ್ತದೆಂದರೆ, ಈ ಮಸೂದೆಯು ಇನಾಂಗ್ರಾಮಗಳಲ್ಲಿರುವ ಧಾರ್ಮಿಕಸಂಸ್ಥೆಗೆ ಸೇರಿದ ಜಮೀನುಗಳಿಗೆ ಅನ್ವ

(SRI M. RAJASEKHARA MURTHY.)

ಯಿಸುವುದಿಲ್ಲ ಎಂಬುದು. ನನ್ನ ಮಿತ್ರರು ಅನೇಕರು ಈಗ ತಾನೆ ಹೇಳಿದಹಾಗೆ ಇನಾಂ ಗ್ರಾಮಗಳೇ ಅಲ್ಲದೆ ಮಠ, ದೇವಸ್ಥಾನ ಮುಂತಾದ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಜಮೀನುಗಳು ಸಂಸ್ಥಾನದಲ್ಲಿ ಹೇರಳವಾಗಿವೆ. ಅದರಲ್ಲೂ ಮಲೆನಾಡಿನ ಕೆಲವು ತಾಲ್ಲೂಕುಗಳಲ್ಲಿ ಕಾಲುಭಾಗದಷ್ಟು ಜಮೀನುಗಳು ಮಠ ಮತ್ತು ದೇವಸ್ಥಾನಗಳಿಗೆ ಸೇರಿವೆ. ಅವುಗಳನ್ನು ಸಾಗುವಾಡುವ ರೈತರ ಸ್ಥಿತಿ ಇನಾಂ ಗ್ರಾಮಗಳ ರೈತರ ಸ್ಥಿತಿಗಿಂತ ಬಹಳ ಶೋಚನೀಯವಾಗಿದೆ. ಅನೇಕ ಸಂದರ್ಭಗಳಲ್ಲಿ ಈ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಜಮೀನುಗಳನ್ನು ಮುಜರಾಯಿ ಇಲಾಖೆಯವರು 5 ಅಥವಾ 10 ವರ್ಷಗಳಿಗೊಂದುಸಲ ಹರಾಜುಮಾಡುತ್ತಾರೆ. ಅದರ ಪರಿಣಾಮವಾಗಿ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಜಮೀನು ಈ ದಿವಸ ಬಹಳ ಕನಿಷ್ಠದರ್ಜೆಗೆ ಬಂದಿದೆ. ಏಕೆಂದರೆ, ಹರಾಜಿನಲ್ಲಿ ಪಡೆದ ಜಮೀನು ಗೇಣೀದಾರರಿಗೆ ಶಾಶ್ವತವಲ್ಲ, ಆದ್ದರಿಂದ ಜಮೀನಿನಲ್ಲಿ ಬೆಳೆದ ಫಸಲನ್ನು ತಗೆದುಕೊಳ್ಳುವುದರಲ್ಲಿ ಆತನಿಗೆ ಆಸಕ್ತಿ ಇದೆಯೇ ಹೊರತು ಜಮೀನು ಅಭಿವೃದ್ಧಿಯ ವಿಚಾರದಲ್ಲಿ ಆಸಕ್ತಿಯಿಲ್ಲ. ಹೀಗಾಗಿ ಜಮೀನನ್ನು ಅಭಿವೃದ್ಧಿಪಡಿಸುವುದಕ್ಕೆ ಅವರಿಗೆ ಏನೂ ಆಸಕ್ತಿಯಿರುವುದಿಲ್ಲ. ಇದರಿಂದ ಮಲೆನಾಡು ಪ್ರಾಂತಗಳಲ್ಲಿ ಮಠ ಮತ್ತು ದೇವಸ್ಥಾನಗಳಿಗೆ ಸೇರಿದ ಜಮೀನುಗಳು ಅಧೋಗತಿಗೆ ಇಳಿದಿವೆ. ಈ ದೃಷ್ಟಿಯಿಂದಲೂ ಮತ್ತು ಇಂಥ ಇನಾಂ ಜಮೀನುಗಳನ್ನು ಸಾಗುವಾಡುವ ರೈತರ ಹಿತದೃಷ್ಟಿಯಿಂದಲೂ ಇಂಥ ಇನಾಂತಿಗಳನ್ನೂ ಕೂಡ ರದ್ದುಪಡಿಸುವುದು ಅತ್ಯಾವಶ್ಯಕ ಎಂದು ಒತ್ತಿ ಹೇಳುತ್ತೇನೆ."

Sri KADIDAL MANJAPPA.—I still adhere to the views. I have not changed my views.

Sri M. RAJASEKHARA MURTHY.—I do not know why it is not incorporated in this Bill.

Sri KADIDAL MANJAPPA.—I will tell you.

Sri M. RAJASEKHARA MURTHY.—The area involved here is too small when compared to the area involved in other States. In Madras it is 174.16 lakhs of acres; in the United Provinces it is 525 lakhs; in Bihar 396.94 lakhs; in Madhya Pradesh 394.4 lakhs; West Bengal 127 lakhs; Orissa 100 lakhs; Assam 16.72 lakhs; and in Mysore according to this Bill, excluding service and religious inams, it is 3.7 lakhs of acres. We would have been more happy if these religious and service inams had also been brought within the purview of this Bill.

Next regarding the determining of the tenant. In Mysore, there are 2,134 Inam villages including all classes of inams—Jodi, Kayamgutta and Sarvamanya;

Jodi villages	1,244
Kayamgutta villages	440
Sarvamanya villages	450
Total	2,134

Out of these, survey settlement has been introduced in only 628 villages and non-survey villages are 1,506. It is very difficult under these circumstances to determine since how long a tenant was cultivating a particular land. In all cases the benefit of doubt must go to the tenant. The Deputy Commissioner, as the enquiring authority, must bear in mind all this.

Regarding premium, I am entirely opposed to the payment of premium by these ryots and it is opposed on grounds of equity and justice. Because, at the time when the inam was given to the inamdars, there existed the ryots in the villages. Their rights were taken away by the Government at the time of giving land to the inamdars. The ryots were not consulted. They were not given any compensation. Now by means of legislation, you are transferring the rights from the inamdars to the ryots. I think there is no justification to demand the ryots to pay premium. Even if the committee feels that the premium should be paid, the amount should be reduced and the number of instalments must be increased because in these hard days when the tenant is living from hand to mouth we are not at all justified to demand him to pay the premium in heavy instalments.

Regarding compensation—these inams were given because some of the inamdars had rendered meritorious and distinguished services and they are now dead, leaving behind minor children and widows. Most of these

minor children and widows are entirely dependent upon the small income they are now getting from the inams. In those circumstances, it is the moral duty of the Government, while taking away those rights, to pay a considerable sum as compensation. Regarding this there is difference of opinion and even Pandit Nehru, while presiding over a political conference at Jhansi in U. P. in October 1928 made a forcible plea for abolition of inams and said that adequate compensation should be given. He also stated:

> "Confiscation, on the other hand, though equitable and perfectly justifiable, may lead to many cases of hardships. I would suggest therefore that some compensation might be given specially in cases of hardships but compensation should certainly not be given so as to make the receiver a wealthy man again."

In the year 1946, when the Congress held general elections they incorporated a new paragraph about abolition of inams and payment of compensation. That para reads as follows:

> "The reform of the land system which is so urgently needed in India involves removal of intermediaries between the peasant and the State. The right of such intermediaries should therefore be acquired on payment of equitable compensation."

Therefore there are no two opinions about the payment of compensation. Even if there is a difference of opinion it cannot be real and it cannot be in consonance with the Indian Constitution. As per the Bill we are now framing, the compensation we are paying is in my opinion quite satisfactory when compared with the compensation that is being paid in other States. These are the figures given in Reserve Bank of India Bulletin of June 1952:

		Rs.	
Madras	..	9	per acre
U. P.	..	27	"
Bihar	..	38	"
Madhya Pradesh	..	17	"
West Bengal	..	20	"
Orissa	..	10	"
Assam	..	30	"

In Mysore, according to these figures, it is Rs. 48-11-6. The payment of compensation given in instalments in most of these cases, as I said, is entirely dependent upon the income they are now getting. The payment of compensation must be given in full and in cash and not by bonds so that they may invest the same amount in some other business and eke out their livelihood. Now the question arises as to how to obtain cash. Where to get this money? I suggest that it must be by means of raising loans and payment shall not be by means of bonds. I suggest that it should be financed by raising loans because the volume of compensation that we pay is very much less when compared to the total compensation paid to the zamindars in other States. The following are the figures:

		Crores.
Madras	..	15.5
U. P.	..	140.0
Bihar	..	150.0
Madhya Pradesh	..	68.5
West Bengal	..	25.0
Orissa	..	10.0
Assam	..	5.0
Mysore	..	1.8

It is easy for Government to raise loans and give the compensation, and also in return we get additional revenue. We get much more when compared with the other State.

In Madras they get	1.0 crore
In U. P. they get	7.0 crores
In Bihar	6.5 "
In Madhya Pradesh	2.75 "
In West Bengal	1.4 "
In Orissa	.67 lakh
In Assam	.20 lakh

(SRI M. RAJASEKHARA MURTHY.)

and in Mysore we get .11 lakh. The average percentage of additional revenue when compared to the total compensation is as follows :

Madras	..	6.45
U. P.	..	5.00
Bihar	..	4.33
Madhya Pradesh	..	4.00
West Bengal	..	5.60
Orissa	..	6.70
Assam	..	4.00
Mysore	..	7.33

Therefore the additional revenue we get is much more than what the other States get.

Now, regarding the mode of payment, I am very much opposed to payment by issuing bonds because the issuing of bonds will shake the credit of Government. Another difficulty is that you will aggravate the inflationary potentialities that already exist in the country's economy. There will be a fall in the value of bonds, the bond market being naturally oversaturated and it will raise the cost of future Government borrowing. In this connection I would like to read out the speech of Sri C. D. Deshmukh while addressing the 14th Annual General Meeting of the Shareholders of the Reserve Bank of India at Bombay on the 9th of August 1948 :

"To overcome this difficulty it is sometimes suggested that instead of in cash the zamindars be paid in terms of the loan bonds; but note must be taken of the impact of such a step on government credit. If the bonds are made transferable (apart from the difficulty that this will aggravate the inflationary potential already present in the country), the fall in their value which must necessarily result through the bond market being oversaturated with them is bound to raise the cost of future Government borrowing, may be to even prohibition levels. This will be, so to speak, the capital markets' reply of any backdoor method of swamping in with loans which by the front door it will refuse to take. Nor does it seem possible to keep Government credit unimpaired by making the bonds non-transferable (or giving them a special name of their own), as this would not diminish the liability of the Government, which will be specified in the contract, either in respect of interest or in respect of capital. Only the bond market will not then be given a chance to declare its verdict on their value. But such artificial screening will not escape the notice of the future investor, who will necessarily bear in mind the existing volume of the public debt while examining the attractiveness of the terms of any new issues offered by the Government concerned."

In this connection I would like to bring to your notice the views expressed by the Finance Ministers' Conference that was held in July 1948. The initiative was taken by the Bihar Government. The Government of Bihar was the pioneer which initiated this Bill. It consisted of mostly sons of big zamindars and some of them wanted to delay the passing and execution of this Bill. There was a long-drawn correspondence between the Central Government and the Bihar Government which culminated in the Finance Ministers' Conference in 1948.

In the first place the compensation given by the various State Governments is too inadequate. The total magnitude of the compensation amount is unmanageable when compared with the resources of the State. If the State Government wants to give priority to this abolition scheme then it will have to forgo other nation-building projects and in the present financial situation, it is impossible to raise money by floating loans. These are the four points. Later on

some of the Governments, specially the Bihar Government, suggested payment in terms of bond. This proposal was turned down for reasons stated above. As an alternative the Bihar Government suggested payment in terms of non-transferrable bond. This suggestion was referred to Sri N. P. Engineer who was the then Advocate-General and who was also the Chief Prosecutor in the historic Red Fort trial. He advised the Government that payment of compensation by means of a non-transferrable bond was opposed to section 229 (2) of the Government of India Act, 1935. He drew this distinction; the bond is only a promise to pay a certain sum; it is not an actual payment of cash; it is only a promise to pay something; under section 229 (2) of the Government of India Act, it is not a valid payment; when payment in terms of transferrable bond is not a vaild payment, payment in terms of a non-transferrable bond is open to more objection, and cannot be considered as valid. That is the view expressed by the then Federal Advocate-General.

Whatever it is, this measure has been brought in this House and I am sure Government will take immediate steps to see that the Bill is passed and executed. I am very much doubtful whether the Bill is going to be executed by this Government because they are simply postponing.

Sri KADIDAL MANJAPPA.—We are very cautious.

Sri M. RAJASEKHARA MURTHY.—But the history of Congress attitude towards the all important question of Agrarian Reforms is a tortuous tale of broken promises and a shameless betrayal and a conscious sabotage. The Congress Organisation being headed by these big landlords and zamindars who stubbornly resisted, could not include this item in the election manifesto prior to 1936. The British Government have evolved one technique; that is the technique of appointing committees and commissions wherever they chose not to do anything. Our Congress rulers soon after they came to power have successfully inherited and completely copied the same technique and we are enmeshed in various commissions and committees which have wasted their valuable time for nothing at all. This Bill is being kicked like foot-ball from Legislature to Select Committee without any goal being scored whatsoever. I am sure that Government will at least this time make an earnest attempt....

Mr. SPEAKER.—Why do you spoil your valuable speech by making comments like these?

Sri M. RAJASEKHARA MURTHY.—With these observations, I welcome this Bill.

ಶ್ರೀ ವಿ. ಆರ್ ನಾಯ್ಡು (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ಈಗ ಸುಮಾರು 3–4 ದಿನಗಳಿಂದಲೂ ಈ ಜೋಡಿ ಮತ್ತು ಇನಾಂದಾರರುಗಳ ಜಮೀನಿನ ವಿಚಾರದಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುತ್ತ, ಕೆಲವರು ಇದನ್ನು ಅನುಮೋದಿಸಿದ್ದಾರೆ, ಮತ್ತೆ ಕೆಲವರು ಇದನ್ನು ವಿರೋಧಿಸಿದ್ದಾರೆ. ಇನ್ನು ಕೆಲವರು ಈ ಬಗ್ಗೆ ತಮ್ಮ ಸಲಹೆಗಳನ್ನು ನೀಡಿದ್ದಾರೆ. ಈ ಮಾನ್ಯ ಸಭೆಯ ಸದಸ್ಯರಲ್ಲಿ ಅನೇಕರು ಜೋಡಿದಾರರಾಗಿರುವುದರಿಂದ ಅವರು ಇದರ ಬಗ್ಗೆ ದೀರ್ಘಾಲೋಚನೆಮಾಡಿ ಬಹಳ ಉತ್ತಮ ಸಲಹೆಗಳನ್ನು ನೀಡಿದ್ದಾರೆ. ಈ ಬಿಲ್ಲಿನ ಸಂಬಂಧವಾಗಿ ನನಗೂ ಕೂಡ ಕೆಲವು ವಿಚಾರಗಳು ಗೊತ್ತಿರುವುದರಿಂದ ಅವುಗಳನ್ನು ನಾನೀಗ ತಿಳಿಸಬೇಕೆಂದು ಇಚ್ಛಿಸಿದ್ದೇನೆ.

ಈ ಹಿಂದೆ ಬ್ರಿಟಿಷರ ಕಾಲದಿಂದಲೂ ಈ ಇನಾಂ ಮತ್ತು ಜೋಡಿದಾರರುಗಳು ಆ ರೈತರಿಗೆ ಕೊಡುತ್ತಿದ್ದಂಥ ಕಿರುಕುಳವನ್ನು ಇಲ್ಲಿಯತನಕ ಯಾವ ಸರ್ಕಾರವೂ ಅದನ್ನು ತಪ್ಪಿಸಲು ಸಾಧ್ಯವಾಗಿರಲಿಲ್ಲ. ಈ ದಿವಸ ಆ ಕಿರುಕುಳಗಳನ್ನೆಲ್ಲಾ ತಪ್ಪಿಸುವ ಸಲುವಾಗಿ ನಮ್ಮ ಕಾಂಗ್ರೆಸ್ ಸರ್ಕಾರ ಇಂಥಾ ಒಂದು ಬಹಳ ಅನುಕೂಲವಾದ ಮಸೂದೆಯನ್ನು ತಂದಿರುವುದನ್ನು ನೋಡಿ ನಮ್ಮ ವಿರೋಧ ಪಕ್ಷದ ಶ್ರೀ ಎಸ್. ಗೋಪಾಲಗೌಡರಿಗೂ ಕೂಡ ಬಹಳ ಸಂತೋಷ ಉಂಟಾಗಿದೆ. ಹೀಗೆ ನೂರಾರು, ಸಾವಿರಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದ್ದಂಥ......

ಅಧ್ಯಕ್ಷರು.—ಸರ್ಕಾರದವರು ಇನ್ನೂ ಮಾತುಗಳಲ್ಲಿ ದ್ವಾರೆಯೇ ಹೊರತು ಅದನ್ನು ಕಾರ್ಯತಹ ಸಾಧಿಸಿರುವುದಿಲ್ಲವೆಂದು ಹೇಳಿದ್ದಾರೆ ಅವರು.

ಶ್ರೀ ವಿ. ಆರ್. ನಾಯ್ಡು.—ಹಿಂದಿದ್ದ ಸರ್ಕಾರಗಳಿಗೆ ಇದನ್ನು ನಿರ್ವಹಣೆ ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ. ಅಂಥದ್ದನ್ನು ಈಗ ನಮ್ಮ ಕಾಂಗ್ರೆಸ್ ಸರ್ಕಾರ ಬಂದಮೇಲೆ ಮಾಡುವುದಕ್ಕೆ ಸಾಧ್ಯವಾಗಿದೆ. ನಮ್ಮ ಕಾಂಗ್ರೆಸ್ ಸರ್ಕಾರ ಸಾಧಿಸಿರತಕ್ಕ ಅನೇಕ ಮಹತ್ಕಾರ್ಯಗಳಲ್ಲಿ ಇದೂ ಒಂದಾಗಿದೆ,

(ಶ್ರೀ ವಿ. ಆರ್. ನಾಯ್ಡು)

1-:0 A. M.

ಆದರೆ ಇದರಲ್ಲಿ ಮುಖ್ಯವಾದುದಾಗಿ ಪರಿಹಾರದ ಪ್ರಶ್ನೆ ನಮ್ಮ ಮುಂದಿದೆ. ಜೋಡೀದಾರರೂ ಮತ್ತು ಇನಾಂದಾರರೂ ಸಾವಿರಾರು ವರ್ಷಗಳಿಂದ ವಂಶ ಪಾರಂಪರ್ಯವಾಗಿ ಅವರಲ್ಲಿ ಬಂದ ಥಹ ಉತ್ಪತ್ತಿಯನ್ನು ಅನುಭವಿಸಿದ್ದಾರೆ. ಅಂದ ಮೇಲೆ ಈಗ ಅವರಿಗೆ ಪರಿಹಾರ ಕೊಡಬೇಕೆಂದು ಏನು ಅಂಕಿ ಅಂಶಗಳಿಂದ ನಿರ್ದಿಷ್ಟವಾಡಿದ್ದಾರೆ ಅದು ಬಹಳ ಜಾಸ್ತಿಯಾಗಿದೆಯೆಂದು ಅನೇಕರು ಅಭಿಪ್ರಾಯಪಟ್ಟಿರುವ ಹಾಗೆ ನಾನೂ ಭಾವಿಸುತ್ತೇನೆಂದು ಹೇಳುತ್ತೇನೆ. ಆದ್ದರಿಂದ ಈ ಪರಿಹಾರದ ವಿಚಾರದಲ್ಲಿ ಸರ್ಕಾರದವರು ದೀರ್ಘಾಲೋಚನೆ ಮಾಡಬೇಕೆಂದು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳವರಿಗೂ ಅರಿಕೆಮಾಡಿಕೊಂಡಿದ್ದೇನೆ. ಸೆಲೆಕ್ಟ್ ಕಮಿಟಿಯವರೂ ಇದನ್ನು ಗಮನಿಸಬೇಕೆಂದು ನನ್ನ ಪ್ರಾರ್ಥನೆ.

ಎರಡನೆಯ ವಿಷಯವೇನೆಂದರೆ, ಈಗ ನಾವೆಲ್ಲರೂ ಕೇಳಿರುವ ಹಾಗೆ, ಹೈದರಾಬಾದಿನಲ್ಲೂ ಇದೇ ರೀತಿ ಜೋಡೀದಾರಿ, ಇನಾಂದಾರಿ ರದ್ದಿಯಾತಿ ವಿಷಯ ಬಂದ ಸಮಯದಲ್ಲಿ ಅಲ್ಲಿನ ನೈಜಾಮರು ತಮ್ಮ ಆಸ್ತಿಪಾಸ್ತಿಗಳಿಂದ ನೂರಾರು ಎಕರೆಗಳನ್ನು ತೆಗೆದು ಮುಫತ್ತಾಗಿ ರೈತರಿಗೆ ಹಂಚಿದರು. ಅದೇ ರೀತಿ ನಮ್ಮ ಶ್ರೀಮನ್ಮಹಾರಾಜಾವರೂ ಬಡವರಿಗೆ ಹಂಚಿಕೆ ಮಾಡಿ ಅವರ ಕೃತಜ್ಞತೆಗೆ ಪಾತ್ರರಾಗಿ ಇತರರಿಗೆ ಮೇಲ್ಪಂಗ್ತಿ ಹಾಕಿಕೊಡಬೇಕೆಂದು ಹೇಳುತ್ತೇನೆ. ರೈತರು ಇದರಿಂದ ಬಹಳ ಸಂತೋಷಗೊಳ್ಳುತ್ತಾರೆಂಬುದನ್ನು ನಾನು ಒತ್ತಿ ಹೇಳಬೇಕಾಗಿಲ್ಲ.

ಈಗಾಗಲೇ ಇನಾಂದಾರರೂ ಮತ್ತು ಜೋಡೀದಾರರೂ ರೈತರಿಗೆ ಕೊಡುತ್ತಿರುವ ಕಿರುಕುಳಗಳನ್ನು ಅನೇಕರು ವಿವರಿಸಿದ್ದಾರೆ. ನಿಜವಾಗಿಯೂ ಅವರ ಕಿರುಕುಳಗಳನ್ನು ಹೇಳತೀರದು. ನಾನೇ ಕೆಲವು ಕಡೆ ಹೋಗಿ ನೋಡಿದ್ದೇನೆ. ಶಿವ! ಶಿವ! ಆ ಕಷ್ಟ ಹೇಳಲಾರೆ. ಬೆಳಗಿನಿಂದ ರಾತ್ರಿಯವರಗೂ ದುಡಿಯುತ್ತಿದ್ದು ಹಾಕುವ ರೈತನನ್ನು ಜೋಡೀದಾರರು ಉಪಯೋಗಿಸಿಕೊಳ್ಳುತ್ತಾ ಅನೇಕ ರೀತಿಯಲ್ಲಿ ತೊಂದರೆ ಕೊಡುತ್ತಿರುವುದು ಸರ್ವಸಾಮಾನ್ಯವಾಗಿದೆ. ಎಲ್ಲಾ ಜೋಡೀದಾರುಗಳೂ ಅದೇ ರೀತಿಯಾಗಿದ್ದಾರೆ ದು ನಾನು ಭಾವಿಸುವುದಿಲ್ಲ. ಶ್ರೀಮಾನ್ ನಾರಾಯಣರೆಡ್ಡಿಯವರಂಥ ಜಮೀನ್‌ದಾರರು, ರೈತರನ್ನು ಸಂತೋಷದಿಂದ ಇಟ್ಟುಕೊಂಡಿರುವಂಥವರು ಬಹಳ ವಿರಳ. ಆದ್ದರಿಂದ ದೇಶದಲ್ಲಿ ಅಂಥ ಒಬ್ಬಿಬ್ಬರಿದ್ದರೆ ಆಗುವುದಿಲ್ಲ. ಈ ಕಾರಣದಿಂದ ಇಂಥ ಮಸೂದೆಯನ್ನು ತರಬೇಕಾದದ್ದು ಅಗತ್ಯವಾಗಿದೆ.

ಮಠಗಳನ್ನೂ ಧಾರ್ಮಿಕ ಸಂಸ್ಥೆಗಳನ್ನೂ ಈ ಮಸೂದೆಯಲ್ಲಿ ಕೈಬಿಟ್ಟಿದ್ದಾರೆಂದು ಕೆಲವರು ಆಕ್ಷೇಪಣೆ ಮಾಡಿದರು. ನನ್ನ ಅಭಿಪ್ರಾಯದಲ್ಲೂ ಅವುಗಳನ್ನು ಈ ಮಸೂದೆಯಲ್ಲಿ ಸೇರಿಸಿಕೊಳ್ಳಬೇಕಾದದ್ದು ಸೂಕ್ತವೆಂದು ಹೇಳುತ್ತೇನೆ.

ಒಟ್ಟಿನಲ್ಲಿ 10,000 ಅಡಿಗಳ ಕೆಳಗೆ ಹೋಗಿ ಗಣಿಗಳಲ್ಲಿ ಕೆಲಸಮಾಡಿ ಒಂದು ರೂಪಾಯಿ ಸಂಪಾದನೆ ಮಾಡುವ ಒಬ್ಬ ಕೂಲಿಗೂ, ಮೇಲೆ ಷರಾಯಿ ಹಾಕಿಕೊಂಡು ಠೀವಿಯಿಂದ ಓಡಾಡುತ್ತಾ 4,000 ರೂಪಾಯಿಗಳನ್ನು ಸಂಪಾದನೆ ಮಾಡಿಕೊಳ್ಳುವ ಒಬ್ಬ ಅಧಿಕಾರಿಗೂ ಯಾವುದೊಂದು ಅಂತರವಿದೆಯೋ ಅದೇರೀತಿ ಇನಾಂದಾರರು ನಡೆಸುತ್ತಿದ್ದ ದರ್ಬಾರಿಗೂ, ಇನಾಂದಾರರ ಕೈಕೆಳಗೆ ಸಿಕ್ಕಿ ನರಳುತ್ತಿದ್ದ ರೈತರಿಗೂ ಇರತಕ್ಕ ಅಂತರವನ್ನು ಹೋಗಲಾಡಿಸುವಂತ ಧೈರ್ಯದಿಂದ ಈ ಬಿಲ್ಲನ್ನು ತಂದು ಸರ್ಕಾರದವರು ಇಂದು ನಮ್ಮ ವಿರೋಧ ಪಕ್ಷಗಳವರಿಗೂ ಆನಂದವನ್ನು ತಂದಿದ್ದಾರೆ. ಇದರಂತೆಯೇ ಇನ್ನೊಂದು ಸುಧಾರಣೆಯನ್ನು ತಂದು ಯಾರಿಗೆ ಜಮೀನಿಲ್ಲವೋ ಅವರುಗಳು ಜಮೀನು ಕೊಡಬೇಕೆಂದು ಕೇಳಿದರೆ, ಅವರಿಗೆ ಕಡ್ಡಾಯವಾಗಿ 5 ಎಕರೆಯಷ್ಟು ಕೊಡುವಂತೆ ಒಂದು ಏರ್ಪಾಡುಮಾಡಿದರೆ ದೇಶವೆಲ್ಲಾ ತಮ್ಮನ್ನು ಕೊಂಡಾಡುತ್ತದೆನ್ನುವುದರಲ್ಲಿ ಸಂದೇಹವಿಲ್ಲ. ನಾನೇ ಸ್ವಲ್ಪ ಜಮೀನು ಕೊಡಿಸಿಕೊಡಿ, ಜಮೀನುಮಾಡುವುದಕ್ಕೆ ಬಹಳ ಆಸೆಯಾಗಿದೆಯೆಂದು ಎಷ್ಟೋಸಾರಿ ಕೇಳಿಕೊಂಡಿದ್ದೆ. ಇದುವರೆಗೂ ಕೊಡಲಿಲ್ಲ. ಇನ್ನು ಮುಂದಾದರೂ ಜಮೀನು ಮಾಡಬೇಕೆಂದು ಆಸೆಪಡುವವರಿಗೆಲ್ಲಾ 5-5 ಎಕರೆಗಳನ್ನು ಕಡ್ಡಾಯವಾಗಿ ಕೊಟ್ಟು ಸಹಾಯ ಮಾಡಿದರೆ ಬಹಳ ಸಹಾಯಮಾಡಿದಂತಾಗುತ್ತದೆಂದು ಹೇಳಿ, ನಾನು ಈ ಮಸೂದೆಯನ್ನು ಸ್ವಾಗತಿಸುತ್ತೇನೆ. ಅನೇಕ ವರ್ಷಗಳಿಂದ ನರಳುತ್ತಿದ್ದ ರೈತರುಗಳನ್ನೂ ಶ್ರಮಜೀವಿಗಳನ್ನೂ ಜಮೀನ್ದಾರರ ಹಿಡಿತದಿಂದಲೂ ಇನಾಂದಾರರುಗಳ ಹಿಡಿತದಿಂದಲೂ ಬಿಡುಗಡೆ ಮಾಡಲಿರುವ ಈ ಸರ್ಕಾರಕ್ಕೆ ನನ್ನ ಅನಂತಾನಂತ ವಂದನೆಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri M. V. RAMA RAO (Tumkur).—Mr. Speaker, Sir, I am very grateful to you for giving me an opportunity to make a few observations on this Bill. This Inam Bill is such a momentous piece of proposed legislation that I should have thought that Government would have found the time, the leisure as well as the carefulness to go into the question a little more elaborately than they seem to have done in the proposed Bill. A reading of the Statement of Objects and Reasons of this Bill is so disappointing that a person who reads this statement will not be able to know why Government wish to bring forward this legislation and why they want it to be implemented and in the particular manner they have indicated. It is not clear what other measures they propose to resort to in order to carry out their objective. Sir, an Inams Bill is said to have been introduced in the previous Legislative Assembly in the year 1951 and the Bill had been referred to a Select Committee and when the term of the Legislative Assembly expired in 1952, the Bill lapsed. The previous Bill really received, if I may say so, very short shrift at the hands of the then

Government as well as at the hands of the then Legislature. The statement continues to say:

"The State Government have again carefully considered the question of abolition of inams; they have been advised that any special provision in respect of Sringeri Jahagir as recommended by the Select Committee of the Assembly in 1952, may be discriminatory and unconstitutional unless similar provisions are made for other religious inams. It is therefore proposed to exclude for the present religious and charitable inams and undertake legislation only for the abolition of personal inams and miscellaneous service inams other than village service inams held by shanbhogs, patels, thotis, talaries and nirgantis..."

Now I should like to point out, firstly, that the very conception of this Bill is so isolationist that Government would be well advised to give more ample thought to the desirability of tackling the question of abolition of all inams whatever their origin, whatever their usefulness and whatever may be the effect of the abolition. If they are not prepared to go the whole hog, then even for taking up this question piecemeal and proposing legislation piecemeal and in a haphazard fashion, they have to justify every part of the Bill that they have thought of. This is such an important question that I am sure my esteemed friend, the Revenue Minister, will not expect me to sing the praises of the Ministry or of the individuals composing it, but will listen with patience and understanding to whatever criticisms I may have to make and whatever suggestions I may have to offer.

Sri KADIDAL MANJAPPA.—I have not asked you to praise me.

Sri M. V. RAMA RAO.—Of course not. That is exceedingly good of him. Now if it is not proposed to abolish these service inams and if it is proposed to maintain, preserve and probably perpetuate these religious inams, why is the Government in a hurry to abolish these personal inams? That is a question I pose, firstly. I know as a matter of fact that most of these religious inams are functioning so inefficiently and unsatisfactorily that far more good can be done to the State and the people who have the fortune or the misfortune to inhabit it by abolishing those religious inams in the first instance and then taking up this second, third or fourth.

Just to give one illustration I shall mention what is happening in the taluk of Nelamangala, the elected representative of which, I notice, is not present in the House—I wish he were here. There is an inam there granted, I do not know, when and by whom, to the mutt which is familiarly known as the Sivaganga Mutt. There are several villages which constitute the estate of that Mutt and the estate is so badly administered and the Swamiji is so completely a Sanyasi, and, the administrator, if any, is so thoroughly protected that the estate is not being administered at all and at least a few hundred acres, if not a few thousand acres, of excellent cultivable land lie fallow, neglected and uncared for; and no Government now, before and probably hereafter, because this Bill contains no such indications, is likely to interest itself in seeing whether this cultivable land shall be put to good account and use so that the community may profit by it. Now what is the basic principle on which the abolition of inamdaris, jahagirdaris or zamindaris is to be justified? That is the main question to which we have to ask ourselves. To my mind it seems that these inams and these other antiquated forms of farming of rents and assessments may have been found a necessity in the days when people ruled just as they liked and established no recognised forms of Government or administration and did pretty much as they

pleased and there was no distinction between the personal fortune of the man who ruled and the public Treasury of the State of which he called himself King or ruler; in those spacious days, in those old days, ancient feudal forms of farming out rents, of agencies for collection of assessment and things of that kind have grown up. It is not as if a small propertied or intelligent class arrogated to itself the opportunity or the distinction of expropriating everybody else in the land so that it may live in peace and comfort, and those who delude themselves into thinking that merely by taking away lands from those who do not personally engage in agriculture as some people think it is necessary for every one to do and giving them to those who pretend and claim that they can, is going to solve the food problem or make the solution of the land problem any more satisfactory than what it is already, are merely deceiving themselves and it would be the part of wisdom for the Government to examine the question in its correct perspective and in its full perspective, instead of running away with this kind of thing or borrowing ready—made ideas from somewhere else and trying to put a strait-jacket on them. The principle underlying the abolition of inams, jahagirdaris and the zamindaris is so wholesome that on Legislature, and I am sure no part of this Legislature, and no member of it could object to the principle itself, because the principle is that land must be put to the best use, that cultivable land should not be allowed to go waste and that people who can perform nothing more skilful than carrying on agriculture should not be deprived of the opportunity of occupying land so that they may cultivate it for the benefit of those who happen to live in the land of which the cultivable land forms part. If that is correct, then the right of the Government to collect assessment is certainly undisputed. We have to remember that inams were

the ruler in the bygone days about which we are not enthusiastic for reasons which we do not now find it necessary or convenient to admire. It has been suggested here and elsewhere that inams were granted because a man prepared something very dainty to eat or he pleased the man that was in power at the time by doing something else.

Sir, I read a report of a speech that was made in this Assembly by an Hon'ble Member in which a reference was made to the grant of an inam to a person as a reward for or as recognition of his having supplied a pinch of snuff to a Ruler. I think, Sir, the member must be first congratulated upon his historical sense and secondly our congratulations are certainly due to that artful person who offered that pinch of snuff to the Ruler so that his wisdom might be kindled. Johnson used to say that taking snuff always activates the intellect. If that was so, if the ruler to whom a pinch of snuff was offered should have had his brain activated, if he did have any brain at all, probably the only sensible thing he did was the grant of the inam. While it is quite good for us—it is pleasant for us—to be congratulating ourselves on our own wisdom as against the foolishness and the inequality and injustice which prevailed in those barbarous days, to which happily we do not belong, it is equally necessary for us to remember and to remind ourselves of the manner in which we are making grant of land at the present day. I should like to put to Government a straight proposition. During the past one year, or five years or ten years—it does not matter much—let the Government put itself in the position of a judge and take an objective, detached, disinterested, dispassionate and judicious view of the manner in which land is being granted in this country. While Government undoubtedly deserve the congratulations of the House and the country for their passionate desire to see that

*ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ಈಗ ಎರಡು ಮೂರು ಕಡೆಗಳಿಂದ ಈ ಜೋಡಿ ಮತ್ತು ಇನಾಂ ಗ್ರಾಮಗಳನ್ನು ರದ್ದುಮಾಡುವಿಕೆಯ ಬಗ್ಗೆ ತಂದ ಮಸೂದೆಯ ಮೇಲೆ ಚರ್ಚೆ ನಡೆದಿದೆ. ಆ ಚರ್ಚೆಯಿಂದ ಮುಖ್ಯವಾಗಿ ಒಂದು ವಿಷಯ ಹೊರಬಿದ್ದಿದೆ. ಏನೆಂದರೆ, ನಮ್ಮ ದೇಶದಲ್ಲಿ ಈ ವಿಧವಾದಂಥ ಭೂಸುಧಾರಣಾ ಕ್ರಮವನ್ನು ಜಾರಿಗೆ ತರುವುದರಲ್ಲಿ ಎಲ್ಲರಿಗೂ ಬಹಳ ಸಂತೋಷವಾಗಿದೆಯೆಂದು ಕಂಡುಬರುತ್ತದೆ. ನಮ್ಮ ದೇಶದಲ್ಲಿ ಮುಖ್ಯವಾಗಿ ಕೃಷಿಯೇ ಪ್ರಧಾನವಾಗಿರುವುದರಿಂದ ಶೇಕಡ 80 ಮಂದಿ ತಮ್ಮ ಜೀವನಕ್ಕೆ ಕೃಷಿಯನ್ನೇ ಅವಲಂಬಿಸುತ್ತಾರೆಂದರೆ ಅತಿಶಯೋಕ್ತಿಯಲ್ಲ. ನಾವು ನಮ್ಮ ರಾಜ್ಯಾಂಗದಲ್ಲಿ ಪ್ರತಿಪಾದಿತವಾಗಿರತಕ್ಕ ಸಿದ್ಧಾಂತಗಳಿಗನುಸಾರವಾಗಿ ರಾಷ್ಟ್ರ ಪುನರ್ನಿರ್ಮಾಣ ಮಾಡುವಂಥ ಕಾರ್ಯದಲ್ಲಿ ಜಾತ್ಯಾತೀತ ವರ್ಗಾತೀತ ಸಮಾಜವನ್ನು ರಚಿಸುತ್ತೇವೆಂದು ಒಂದು ದೊಡ್ಡ ಸಂಕಲ್ಪವನ್ನು ನಮ್ಮ ಮುಂದಿಟ್ಟುಕೊಂಡಿದ್ದೇವೆ. ಹೀಗಿರುವಾಗ, ಈ ವಿಧವಾದ ಸುಧಾರಣೆ ತರಬೇಕಾದರೆ, ಮೊದಲನೆಯ ಸುಧಾರಣೆಯೆಂದರೆ ಬಹುಭಾಗದ ಜನಕ್ಕೆ, ಹೆಚ್ಚಾಗಿ ಶ್ರಮದಿಂದ ದುಡಿಯತಕ್ಕ ಜನಗಳಿಗೆ ಪ್ರಯೋಜನವಾಗಿ

ಆಮೇಲೆ ಕಾರ್ಖಾನೆ, ನಗರ ಮೊದಲಾದ ಕ್ಷೇತ್ರಗಳಲ್ಲಿ ದುಡಿಯುವ ಜನಗಳಿಗೆ ಪ್ರಯೋಜನ ದೊರಕುವಂತೆ ಮಾಡಬೇಕಾದ್ದು ಅತ್ಯಗತ್ಯ. ಈ ಕಾರಣದಿಂದ ಭೂಸುಧಾರಣೆಯ ವಿಷಯ ಭಾರತದ ಎಲ್ಲ ಸಂಸ್ಥಾನಗಳ ಗಮನವನ್ನೂ ಸೆಳೆದಿದೆ. ಅನೇಕ ಸಂಸ್ಥಾನಗಳಲ್ಲಿ ಬಹುಶಃ ಅಲ್ಲಿ ಭೂಮಿಯಲ್ಲಿ ಕೆಲಸಮಾಡುವ ಜನರ ಸಂಘಟಿತ ಹೋರಾಟದ ಫಲವಾಗಿಯೋ ಅಥವಾ ಒಂದು ಬಗೆಯ ಒತ್ತಾಯದ ದೆಸೆಯಿಂದಲೋ ಬಹಳ ಕ್ರಾಂತಿಕಾರಕವಾದ ಸುಧಾರಣೆಗಳು ಜಾರಿಗೆ ಬರುತ್ತಿವೆ. ಮೊನ್ನೆ ಹೈದರಾಬಾದು ಶಾಸನ ಸಭೆಯಲ್ಲೂ ಕೂಡ ಆ ದೇಶದಲ್ಲಿ ಭೂಮಿಯನ್ನು ಎಷ್ಟರ ಮಟ್ಟಿಗೆ ಒಬ್ಬರು ಹೊಂದಿರಬಹುದು ಎಂಬದನ್ನು ನಿರ್ಧಾರಮಾಡುವುದಕ್ಕೆ ಕೂಡ ಒಂದು ಸಮಿತಿಯನ್ನು ನೇಮಕಮಾಡಿ ಅದರ ವರದಿಯಂತೆ ತಕ್ಕ ಕಾರ್ಯಕ್ರಮ ಕೈಕೊಳ್ಳುವ ಶಾಸನಗಳನ್ನು ಕೂಡ ನಾವು ನೋಡುತ್ತಿದ್ದೇವೆ. ಮೈಸೂರು ಸಂಸ್ಥಾನದಲ್ಲಾದರೋ, ನಾವು ಇಡೀ ಭಾರತದ ನೋಟ ಎತ್ತಬದ್ದಿದೆ ಅಥವಾ ಜನತೆಯ ದೃಷ್ಟಿ ಯಾವರೀತಿ ಇದೆ ಎಂಬುದನ್ನು ನೋಡಿದರೆ, ಮೈಸೂರು ಸಂಸ್ಥಾನದಲ್ಲೂ ಗುಂಡಪ್ಪಗೌಡರ ವರದಿಯ ಪ್ರಕಾರ ಅಂಥ ಕಠಿಣವಾದ ಅಥವಾ ತುರ್ತಾಗಿ ನಮ್ಮ ಗಮನವನ್ನು ಸೆಳೆಯಬಹುದಾದ ಸೂಚನೆಯಿಲ್ಲದಿದ್ದರೂ, comprehensive ಆದ, ಸರ್ವ ಸಮಸ್ಯೆಗಳನ್ನೂ ನಿವಾರಿಸತಕ್ಕಂಥ ಒಂದು ಭೂಸುಧಾರಣಾ ನೀತಿಯನ್ನು ಅನುಸರಿಸಬೇಕಾದ ಕಾಲ ಬಹಳ ಸಮೀಪದಲ್ಲೇ ಇದೆಯೆಂದು ಭಾವಿಸುವವನಾಗಿದ್ದೇನೆ. ಈಗ ತಂದಿರತಕ್ಕ ಭೂಸುಧಾರಣಾ ಮಸೂದೆಯಾದರೋ ಅಂಥ ಮಹತ್ತರವಾದ ಕಾರ್ಯದಲ್ಲಿ ಮೊದಲನೆಯ ಹೆಜ್ಜೆಯೆಂದು ಹೇಳಬಹುದೆಂಬದರಲ್ಲಿ ಯಾವ ಸಂಶಯವೂ ಇಲ್ಲ.

ಇದರಲ್ಲಿ ಧರ್ಮ ಸಂಸ್ಥೆಗಳನ್ನು ಕೈಬಿಟ್ಟಿದ್ದಾರೆಂದು ಅನೇಕರು ಇದರ ಬಗ್ಗೆ ಹೆಚ್ಚಿನ ಒತ್ತಾಯ ಹಾಕಿದ್ದಾರೆ, ನಿಜ. ಆದರೆ ನಾವು ಮುಖ್ಯವಾಗಿ ಈ ಧಾರ್ಮಿಕ ಸಂಸ್ಥೆಗಳು ರಾಜ್ಯಾಂಗದಲ್ಲಿ ಪ್ರತಿಪಾದಿಸಲ್ಪಟ್ಟಿರುವ ರೀತಿಯಲ್ಲಿ ಎಷ್ಟು ನಿಷ್ಠೆಯಿಂದ ಕೂಡಿವೆ, ಅವು ಮಾಡಿರತಕ್ಕ ಸಮಾಜಸೇವೆ ಏನು ಎಂಬುದನ್ನು ನೋಡುವುದಾದರೆ ಅವುಗಳ ವಿಷಯದಲ್ಲಿ ತೃಪ್ತಿಯನ್ನು ವ್ಯಕ್ತಪಡಿಸುವುದು ಬಹಳ ಸಂಶಯಾತ್ಮಕವಾಗಿದೆ. ಆದ್ದರಿಂದ ಏನೇ ಆದರೂ ಅವುಗಳಿಗೆ ಸಂಬಂಧಪಟ್ಟ ವಿಷಯಗಳನ್ನು ತಜ್ಞರಿಂದ, ಪ್ರಾಜ್ಞರಿಂದ ಪುನರ್ವಿಮರ್ಶೆ ಮಾಡಿಸುವುದು ಅಗತ್ಯವೆಂದು ಹೇಳುತ್ತೇನೆ. ಸರ್ಕಾರದವರೂ ಈ ವಿಷಯದಲ್ಲಿ ಇಲ್ಲಿ ಒಂದು ತಿದ್ದುಪಡಿಯನ್ನು ನಮ್ಮ ಮುಂದೆ ಇಡಬಹುದೆಂದು ತೋರುತ್ತದೆ.

ಇನ್ನು ಪರಿಹಾರಗಳ ವಿಚಾರದಲ್ಲಿ ಅನೇಕ ವಿಷಯಗಳನ್ನು ಇಲ್ಲಿ ಹೇಳಬಹುದು. ಆದರೆ ಕಾನೂನಿನ ವಿಷಯಗಳು ಬಹಳ ತೊಡಕಾದುವು. ಯಾವ ಶಾಸನವನ್ನು ನಾವು ಮಾಡುವುದಾದರೂ ಅದು ರಾಜ್ಯಾಂಗದಲ್ಲಿ ಉಲ್ಲೇಖಿಸಲ್ಪಟ್ಟ ಕಾನೂನುಗಳಿಗೆ ಬೇರೆಯಾಗಿ ಏನನ್ನೂ ಸೂಚಿಸುವುದಕ್ಕಾಗುವುದಿಲ್ಲ. ನಮ್ಮ ಆಶೋತ್ತರಗಳೇನೋ ಹೇರಳವಾಗಿರಬಹುದು. ಇಲ್ಲಿ ಭೂಮಿಯನ್ನು ಇಟ್ಟುಕೊಂಡು ಅದನ್ನೇ ನಂಬಿಕೊಂಡಿರುವ ಅಶಕ್ತರಿಗೂ, ವೃದ್ಧರು, ವಿಧವೆಯರಿಗೂ ಸ್ವಲ್ಪಮಟ್ಟಿಗೆ ಔದಾರ್ಯವನ್ನು ತೋರಿಸಿ, ಮಿಕ್ಕ ರೀತಿಗಳಲ್ಲಿ ಉದ್ಯೋಗಗಳ ಸಂಪತ್ತಿಯಿಂದ ಕೂಡಿರುವ ವರ್ಗಕ್ಕೆ ಆದಷ್ಟು ಕಡಿಮೆ, ಕೇವಲ ಸಾಂಕೇತಿಕವಾಗಿ ಪರಿಹಾರವನ್ನು ಕೊಡಬೇಕೆಂದು ಅಭಿಪ್ರಾಯಗಳು ಬಂದಿವೆ. ಅವೆಲ್ಲಾ ನ್ಯಾಯವಾದ ಉಚಿತವಾದ ಆಶಯಗಳು. ಇನ್ನು ಈ ವಿಚಾರವಾಗಿ ತೀರ್ಮಾನ ಕೈಕೊಳ್ಳುವಾಗ ರಾಜ್ಯಾಂಗದಲ್ಲಿ ಯಾವ ಒಂದು ವ್ಯತ್ಯಾಸಗಳೂ, ತಾರತಮ್ಯಗಳೂ ಇಲ್ಲದೆ ಶಾಸನವಾಗಬೇಕೆಂದು ಶಾಸನಗಳು ಹೇಳುವಾಗ ಅದಕ್ಕೆ ವಿರುದ್ಧವಾಗಿ ಹೋಗುವಂತಿಲ್ಲ. ಆದ್ದರಿಂದ, ಈ ದೃಷ್ಟಿಯಿಂದ ನೋಡುವಾಗ ಇಲ್ಲಿ ಸೂಚಿಸಲ್ಪಟ್ಟ ಪರಿಹಾರದ ಮೊತ್ತವನ್ನು ನಾವು ಇನ್ನೊಮ್ಮೆ ಸೆಲೆಕ್ಟ್ ಕಮಿಟಿಯಲ್ಲಿ ಬಹಳ ದೀರ್ಘವಾಗಿ ಆಲೋಚನೆ ಮಾಡಿ ಇಂದು ದೇಶದ ವಾತಾವರಣ, ಸರ್ಕಾರದ ಪರಿಸ್ಥಿತಿ ಮತ್ತು ಭೂಮಿಯನ್ನು ಕೊಂಡು ಅದರಿಂದ ತಾನು ಉದ್ಧಾರವಾಗಬೇಕೆಂದಿರುವ ರೈತರ ಶಕ್ತಿ— ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ವಿಮರ್ಶಿಸುವುದು ಸೂಕ್ತವೆಂದು ಕಂಡುಬರುತ್ತದೆ.

ಒಟ್ಟಿನಲ್ಲಿ ಈ ಭೂಸುಧಾರಣಾ ಶಾಸನವನ್ನು ನಾನು ಬಹಳ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನಲ್ಲದೆ ಇದರಲ್ಲಿ ಕಂಡುಬಂದಿರತಕ್ಕ ಮತ್ತು ಚರ್ಚೆಯಲ್ಲಿ ಹೊರಬಿದ್ದಂಥ ಅನೇಕ ಲೋಪದೋಷಗಳನ್ನೂ ದೀರ್ಘವಾಗಿ ವಿಮರ್ಶೆ ಮಾಡುವುದಲ್ಲದೆ ಧಾರ್ಮಿಕ ಸಂಸ್ಥೆಗಳ ಬಗ್ಗೆ ಕೈಕೊಂಡ ಧೋರಣೆಯನ್ನೂ ಪುನರ್ವಿಮರ್ಶೆಮಾಡಿ ಸೆಲೆಕ್ಟ್ ಕಮಿಟಿಯಿಂದ ಬರುವ ವರದಿಯನ್ನು ಈ ಶಾಸನ ಸಭೆಯ ಮುಂದೆ ಬರುವಂತೆ ಶೀಘ್ರವಾಗಿ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಜೊತೆಗೆ, ಈ ಭೂಮಿಯ ಹಂಚಿಕೆ ಅಥವಾ ಒಬ್ಬ ಮನುಷ್ಯನ ಅತ್ಯಧಿಕವೆಂದರೆ ಯಾವ ಪ್ರಮಾಣದಲ್ಲಿ ಜಮೀನು ಹೊಂದಿರಬಹುದು ಎಂಬ ವಿಷಯಗಳಬಗ್ಗೆಯೂ ಸರ್ಕಾರದವರು ತೀವ್ರಾಸಕ್ತಿವಹಿಸಿ ಈ ಪ್ರಜಾ ಪ್ರಭುತ್ವಕ್ಕೆ ಯೋಗ್ಯವಾಗಿಯೂ ಮತ್ತು ರಾಜ್ಯಾಂಗದಲ್ಲಿ ಹೇಳಿರುವಂತೆ ನಮ್ಮ ದೇಶದಲ್ಲಿಯೂ ಆರ್ಥಿಕ ಸ್ವಾತಂತ್ರ್ಯ ದೊರೆಯಲು ಅನುಗುಣವಾಗಿಯೂ ಇರುವಂತೆ ಒಂದು ಭೂಸುಧಾರಣೆ ಮಸೂದೆಯನ್ನು ಸಭೆಯ ಮುಂದೆ ಶೀಘ್ರದಲ್ಲೇ ತರಬೇಕೆಂದು ಅರಿಕೆ ಮಾಡಿಕೊಳ್ಳುತ್ತಾ, ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಮಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಅಧ್ಯಕ್ಷರೇ, ಈಗ ತಂದಿರಿತಕ್ಕ ಇನಾಂರದ್ದಿಯಾತಿ ಕಾರಣವೆನ್ನು ಈಗಿರುವ ರೀತಿಯಲ್ಲಿ ಅದು ಸಮರ್ಪಕವಾಗಿಲ್ಲವೆಂದು ಹೇಳಿ ನಾನು ವಿರೋಧಿಸಬೇಕಾಗಿದೆ. ಇನಾಮುಗಳು ರದ್ದಾಗಬೇಕಾದದ್ದು ನ್ಯಾಯವಾಗಿಯೇ ಇದೆ. ಆ ತತ್ವವನ್ನು ಸ್ವಾಗತಿಸುತ್ತಾ, ನನ್ನ ವಿರೋಧವೆಲ್ಲಾ ಅವನ್ನು ತಂದಿರತಕ್ಕ ರೀತಿ ಸರಿಯಾಗಿಲ್ಲವೆಂಬುದೇ ಆಗಿದೆ. ಸುಮಾರು 8 ಲಕ್ಷ ಎಕರೆ ಜಮೀನುಗಳು ಇನಾಂ ಗ್ರಾಮಗಳಲ್ಲಿ ಸೇರಿವೆ. ಅಷ್ಟರಲ್ಲಿ ಅರ್ಧಕ್ಕೆ ಮಾತ್ರ ಇದು ಅನ್ವಯಿಸುವುದಾಗಿ ಹೇಳಿ, ಇನ್ನರ್ಧಕ್ಕೆ ಬೇಕಿಲ್ಲವೆಂದು ಹೇಳಿ ಈ ಮಸೂದೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಅದರ ಔಚಿತ್ಯವಾಗಲಿ, ಕಾರಣವಾಗಲಿ ನನಗೆ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ಒಂದು Comprehensive Bill ತರಬೇಕಾದದ್ದು ಸರ್ಕಾರದ ಕರ್ತವ್ಯವಾಗಿತ್ತು. ಹಿಂದೆ ಶಾಸನ ಸಭೆಯಲ್ಲಿ ಇವೇ ಬಿಲ್ಲನ್ನು introduce ಮಾಡುತ್ತಾ ಆಗಿದ್ದ ರೆವೆನ್ಯೂ ಮಂತ್ರಿಗಳು ಈ ರೀತಿ ಹೇಳಿದರು:

> "In Clause 1, sub-clause (3) it is stated: this applies to all inam villages in the State including the Sringeri and Yelandur Jahagirs."

ಎಂದು. ಈ ಪ್ರಕಾರ 1951ನೆಯ ಇಸವಿಯಲ್ಲಿ, ಆಗ ತಾವು ತಂದಿದ್ದ ಮಸೂದೆಯಲ್ಲಿ ಶೃಂಗೇರಿ ಜಹ

(ಶ್ರೀ ಮುಲ್ಕ ಗೋವಿಂದರೆಡ್ಡಿ.)

ಗೀರಿಯನ್ನು ವಜಾಮಾಡಬೇಕೆಂದು ಉದ್ದೇಶಿಸಿ ಅದನ್ನೂ ಆ ಮಸೂದೆಯಲ್ಲಿ ಸೇರಿಸಿದ್ದಿರಿ. ಆದರೆ ಈಗಿನ ರೆವೆನ್ಯೂ ಮಂತ್ರಿಗಳು ಅದನ್ನೇಕೆ ಸೇರಿಸಿಲ್ಲವೋ ಗೊತ್ತಾಗುತ್ತಿಲ್ಲ. ಸೆಲೆಕ್ಟ್ ಕಮಿಟಿಯವರು ತಮ್ಮ ವರದಿಯಲ್ಲಿ ಆ ರೀತಿ ಸೇರಿಸುವುದು discriminatory ಮತ್ತು unconstitutional ಆಗುತ್ತದೆಂದು ಹೇಳಿದುದರಿಂದ ಬಿಟ್ಟಿದೆಯೆಂದು ಹೇಳಿದರು. ಇದರ ಅರ್ಥವೇನೋ ನನಗೆ ಗೊತ್ತಾಗುವುದಿಲ್ಲ. ಏಕೆಂದರೆ, ಈ ಮುಖ್ಯವಾದ ಸಮಸ್ಯೆಯನ್ನು ಪರಿಹರಿಸಬೇಕಾದ್ದು ನಾಗರಿಕ ಸರ್ಕಾರದ ಕರ್ತವ್ಯವಾಗಿದೆ. ಏಕೆಂದರೆ ಹಿಂದೆ ಯಾವುದೋ ಒಂದು ಕಾರಣದಿಂದ ಆಗಿದ್ದ ಆಳರಸರು ಈ ಇನಾಂತಿಗಳನ್ನು ಅವರುಗಳಿಗೆ ಕೊಟ್ಟಿದ್ದಾರೆ. ಅನ್ಯಾಯವಾಗಿ ಕೊಟ್ಟಿದ್ದುವು ಅವು. ಇದೇ ರೀತಿಯಲ್ಲಿ Religious ಮತ್ತು Charitable ಸಂಸ್ಥೆಗಳ ಇನಾಂತಿಗಳು ಕೂಡ ಆಗಿವೆ. ಆದರೂ ಇವುಗಳ ವಿಚಾರವನ್ನೂ ಈಗಲೇ ಈ ಮಸೂದೆಯಲ್ಲಿ ಸೇರಿಸುವುದಕ್ಕೆ ಇಷ್ಟವಿಲ್ಲ, ಅದಕ್ಕೇ ಬೇರೆ ತರಬೇಕೆಂದು ಬಿಟ್ಟಿದ್ದೇವೆ ಎಂದು ಇಲ್ಲಿ ಹೇಳಿದ್ದಾರೆ. ಒಂದೇ ಸಾರಿ ಈ ಬಿಲ್ಲಿನಲ್ಲೇ ಎಲ್ಲ ಇನಾಂತಿಗಳನ್ನೂ ವಜಾಮಾಡಬಹುದಾಗಿತ್ತಲ್ಲವೇ ? ಅಥವಾ ಕಷ್ಟವಿದ್ದಲ್ಲಿ ಬೇರೆಬೇರೆಯಾದರೂ ಎರಡನ್ನೂ ಒಂದೇಸಾರಿ ತಂದು ವಜಾಮಾಡಬಹುದಾಗಿತ್ತು. ಅದನ್ನು ಬಿಟ್ಟು ಇಲ್ಲಿ Charitable ಮತ್ತು Religious ಇನಾಂತಿಗಳನ್ನು ಬಿಟ್ಟು 8 ಲಕ್ಷ ಎಕರೆಗಳಲ್ಲಿ ನಾಲ್ಕು ಲಕ್ಷ ಎಕರೆಗಳಿಗೆ ಮಾತ್ರ ಅನ್ವಯಿಸುವಹಾಗೆ ಈ ಬಿಲ್ಲನ್ನು ತಂದಿರುವುದರಿಂದ ನಾನು ಇದನ್ನು ವಿರೋಧಿಸಬೇಕಾಗಿದೆ.

ಇನಾಂದಾರರಿಗೆ ಕೊಡತಕ್ಕ ಪರಿಹಾರದ ವಿಚಾರದಲ್ಲಿ ಬಹಳ ಚರ್ಚೆಯಾಗುತ್ತಿದೆ. ರೈತರು ಎಷ್ಟು ಕಷ್ಟಪಟ್ಟು ದುಡಿದರೂ ಅವರಿಗೆ ಯಾವ ಹಕ್ಕೂ ಇಲ್ಲ, ಅವರು ಸಾಲದ ಹೊರೆಯಿಂದ ನರಳುತ್ತಿದ್ದಾರೆ. ಅದರಲ್ಲಿಯೂ ಇನಾಂ ಹಳ್ಳಿಗಳಲ್ಲಿ ಅವರ ಸ್ಥಿತಿ ಬಹಳ ಕಷ್ಟವಾಗಿದೆ ಸರ್ಕಾರಿ ಗ್ರಾಮಗಳಿಗೂ ಇನಾಂ ಗ್ರಾಮಗಳಲ್ಲಿರುವ ರೈತರಿಗೂ ಹೋಲಿಸಿದರೆ, ಇವರ ಸ್ಥಿತಿಯನ್ನು ಹೇಳತೀರದು. ರೈತರ ದುಡಿಮೆಯಿಂದ, ಅವರ ಕಷ್ಟದಿಂದ ಇನಾಂದಾರರೆಂಬ ಒಂದು parasitic class ಜೀವನ ಮಾಡುತ್ತಾ ಬಂದಿದ್ದಾರೆ. ರೈತರಿಗೆ ಈ ಇನಾಂದಾರ ವರ್ಗ ಬಹಳ ಅನ್ಯಾಯ ಮಾಡಿದೆ. ಇದೇ ರೀತಿ ಇರುವುದು ನ್ಯಾಯವಲ್ಲ. ಅವರು ಯಾವ ರೀತಿಯಲ್ಲಿಯೂ ಕಷ್ಟಪಡದೆ ಸುಖದಿಂದ ಜೀವನ ಮಾಡುತ್ತಿದ್ದಾರೆ. ಇಂಥವರಿಗೆ ಏಕೆ ಪರಿಹಾರ ಕೊಡಬೇಕೆಂಬುದು ಅರ್ಥವಾಗುವುದಿಲ್ಲ. ಈ ಪರಿಹಾರ ಕೊಡುವುದು ನ್ಯಾಯವಲ್ಲ. ಆದರೆ ಅವರನ್ನು ಭಿಕಾರಿಗಳನ್ನಾಗಿ, ಭಿಕ್ಷುಕರಾಗಿ ಮಾಡಬೇಕೆಂಬುದು ನನ್ನ ಆಶಯವಲ್ಲ. ನಮ್ಮ ಇಂಡಿಯಾ ದೇಶದಲ್ಲಿ ಬೇರೆ ನಾಗರಿಕರಂತೆ ಅವರು ಸರಿಯಾಗಿ ಜೀವನ ಮಾಡಬೇಕು. ಇದಕ್ಕೆ ಅವರಿಗೆ ಜೀವನಕ್ಕೆ ಎಷ್ಟು ಬೇಕಾಗುತ್ತದೆಯೋ ಅಷ್ಟು ಜಮೀನನ್ನು ಬಿಟ್ಟುಕೊಡುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಅವರೂ ಸರಿಯಾದ ಜೀವನವನ್ನು ನಡೆಸಿಕೊಂಡು ಹೋಗಲಿ. ಆದರೆ ಈಗ ಅವರಿಗೆ ಹೆಚ್ಚು ಪರಿಹಾರ ಕೊಡುವುದರಲ್ಲಿ ಸರ್ಕಾರಕ್ಕೆ, ದೇಶದ ಬೊಕ್ಕಸಕ್ಕೆ ತೊಂದರೆಯಾಗುತ್ತದೆ. ಅಲ್ಲದೆ ರೈತರಿಂದ ತೆಗೆದುಕೊಡುವುದು ನ್ಯಾಯವಲ್ಲ. ಇನಾಂ ಹಳ್ಳಿಗಳಲ್ಲಿರುವ ರೈತರು ಬಹಳ ಕಷ್ಟದಲ್ಲಿದ್ದಾರೆ; ಅವರಿಗೆ ಯಾವ ಪ್ರೀಮಿಯಮ್ಮೂ ಇಲ್ಲದೆ ಜಮೀನು ಕೊಡುವುದು ನ್ಯಾಯ.

ಇನ್ನು 'ಖಾಸ್ ಲ್ಯಾಂಡ್ಸ್' ವಿಷಯ ಹೇಳಿದರು. ಕೆಲವು ಇನಾಂ ಹಳ್ಳಿಗಳಲ್ಲಿರುವ ಜಮೀನೆಲ್ಲಾ ತಮ್ಮ ಖಾಸ್ ಲ್ಯಾಂಡ್ ಎಂದು ಹೇಳಬಹುದೆಂಬ ಒಂದು ಸಮಸ್ಯೆ ಬರಬಹುದು. ಆದರೆ ಅದಕ್ಕೆ ಒಂದು ಪರಮಾವಧಿ (ceiling) ನಿಗದಿ ಮಾಡಿದರೆ ಈ ಸಮಸ್ಯೆ ಬಹಳ ಸುಲಭವಾಗಿ ಬಗೆಹರಿಯುತ್ತದೆ. ಕೆಲವು ಜೋಡಿದಾರರೇ ಅವರ ಇನಾಂ ಅಥವಾ ಜೋಡಿಗಳಲ್ಲಿರುವ ಜಮೀನುಗಳನ್ನು ಸಾಗುವಳಿ ಮಾಡಿಕೊಂಡಿದ್ದಾರೆ, ಇನ್ನು ಕೆಲವರು ಮಾರಿಕೊಂಡು ಬೇರೆಯವರು ಅಂಥ ಜಮೀನುಗಳನ್ನು ತೆಗೆದುಕೊಂಡಿದ್ದಾರೆ. ಇದಕ್ಕೆ ಹೆಚ್ಚು ಕಾಂಪೆನ್‌ಸೇಷನ್ ಕೊಡಬೇಕೆಂದು ಹೇಳುವುದು ಸರಿಯಲ್ಲ. ಅವರು ಆ ಜಮೀನನ್ನು ಮಾರುವುದಕ್ಕೆ ಅವರಿಗೆ ಯಾವ ರೀತಿಯ ಹಕ್ಕೂ ಇರಲಿಲ್ಲ, ಅಕ್ರಮವಾಗಿ ಮಾರಿದ್ದಾರೆ. ಇದು ತಪ್ಪು. ಬೇರೆಯವರು 'ನಾವು ಆ ಜಮೀನನ್ನು ಕೊಂಡುಕೊಂಡಿದ್ದೇನೆ ಆದುದರಿಂದ ಆ ಹಕ್ಕನ್ನು ಅನುಭವಿಸಿಕೊಂಡು ಬರಬೇಕು' ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಈ ಸಮಸ್ಯೆ ಬಹಳ ಮುಖ್ಯವಾದುದು. ಆದುದರಿಂದ ಸರ್ಕಾರದವರು ರೈತರ ಹಿತದೃಷ್ಟಿಯಿಂದ ಕಾನೂನು ಮಾಡಬೇಕೇ ವಿನಾ ಇನಾಂದಾರರ ದೃಷ್ಟಿಯಿಂದ ಮಾಡಬೇಕಾಗಿಲ್ಲ. ನಿಮ್ಮ ಮುಂದಿರುವ ಸಮಸ್ಯೆ ಇದರಿಂದ ಸರಿಯಾಗಿ ಪರಿಹಾರವಾಗಬೇಕು. ಭೂಮಿಯನ್ನುಳುವವರಿಗೆ, ಕಷ್ಟಪಟ್ಟು ದುಡಿಯುವವರಿಗೆ ಅನುಕೂಲವಾಗುವ ರೀತಿಯಲ್ಲಿ ಅವರ ಹಿತದೃಷ್ಟಿಯಿಂದ ಕೆಲಸ ಮಾಡಬೇಕೇ ವಿನಾ ಇನಾಂದಾರರ ಹಿತದೃಷ್ಟಿಯಿಂದ ಕೆಲಸ ಮಾಡಬೇಕಾಗಿಲ್ಲ. ಅವರ ಜೀವನಕ್ಕೆ ಬೇಕಾಗುವಷ್ಟು ಜಮೀನನ್ನು ಅವರಿಗೆ ಉಳಿಸಿಕೊಡುವುದರಲ್ಲಿ ನಮ್ಮ ಅಭ್ಯಂತರವಿಲ್ಲ. ಈಗ ತಂದಿರತಕ್ಕ ಮಸೂದೆಯಲ್ಲಿ Charitable and Religious ಸಂಸ್ಥೆಗಳಿಗೆ ಸೇರಿರುವ ಸುಮಾರು ನಾಲ್ಕು ಲಕ್ಷ ಎಕರೆ ಜಮೀನನ್ನು ಸೇರಿಸಿಲ್ಲ. ಈಗ ಸೆಲೆಕ್ಟ್ ಕಮಿಟಿಗೆ ಇದನ್ನು ಕಳುಹಿಸುವಾಗ ಈ ಸಮಸ್ಯೆಯನ್ನು ಅವರು ಪರಿಶೀಲನೆ ಮಾಡಬಹುದೆಂದು ಅಧಿಕಾರ ಕೊಟ್ಟರೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರಿಯಾಗಿ ಅವಕಾಶವಾಗುತ್ತದೆ. ಇಂಥ ಅವಕಾಶವನ್ನು ಮುಂದೆ ತಳ್ಳುವುದು ನ್ಯಾಯವಲ್ಲ. ಹಿಂದೆ ಇದೇ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಒಪ್ಪಿಸುವ ಸೂಚನೆಯನ್ನು ತಂದಾಗ, ಸರ್ಕಾರದವರು ಇದನ್ನು ಸರಿಯಾದ ರೀತಿಯಲ್ಲಿ ತರುತ್ತಾರೋ ಇಲ್ಲವೋ, ಜಾಗ್ರತೆ ಬರುತ್ತದೆಯೋ ಇಲ್ಲವೋ ಎಂಬ ಅನುಮಾನವನ್ನು ವ್ಯಕ್ತಪಡಿಸಿ ಶ್ರೀ ಹುಚ್ಚೇಗೌಡರು ಭಾಷಣ ಮಾಡಿದುದಕ್ಕೆ ಉತ್ತರವಾಗಿ ಆಗ ರೆವಿನ್ಯೂ ಸಚಿವರಾಗಿದ್ದ ತಾವು ಉತ್ತರವನ್ನು ಹೇಳಿದಿರಿ.

"One of the Hon'ble Members Sri B. Hutche Gowda has his own apprehensions as though there will be inordinate delay with a set purpose or some such thing—he was casting some aspersions—and he was saying that before the next general elections, there is no hope of bringing this Bill and passing it into an Act, I can only tell him that he must wait and see."

ಎಂದು ಹೇಳಿ ಸಾರ್ವಜನಿಕ ಚುನಾವಣೆಗಳಾಗುವುದಕ್ಕಿಂತ ಮುಂಚೆಯೇ ತರುತ್ತೇವೆ ಎನ್ನುವ ರೀತಿ ಹೇಳಿದ್ದಿರಿ. ಆಗ ಅವರಿಗೆ ಏನು ಶಂಕೆಯಿತ್ತೋ ಅದು ಸಕಾರಣವಾಗಿತ್ತು ಎಂದು ಈಗ ಗೊತ್ತಾಯಿತು. ಎರಡು ವರ್ಷಗಳಿಂದಲೂ ಪುನಃ ಈ ಸಭೆಯ ಮುಂದೆ ಬರಬೇಕಾಯಿತು. ಈಗಲೂ ಕೂಡ ಸರ್ಕಾರದವರು ಈ ಸಮಸ್ಯೆಯನ್ನು ಸರಿಯಾದ ರೀತಿಯಲ್ಲಿ ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿಲ್ಲ. ಈ ಶಂಕೆ ಆ ಹೊತ್ತೂ ಇತ್ತು, ಈ ದಿವಸವೂ ಇದೆ. ಈ ಮಸೂದೆಯನ್ನು ಪಾಸು ಮಾಡಿ ಇನ್ನುಳಿದ ನಾಲ್ಕು ಲಕ್ಷ ಎಕರೆ ಜಮೀನಿನ ವಿಚಾರದಲ್ಲಿ ಏನೂ ಮಾಡದಿದ್ದರೆ ಇದರಿಂದ ಏನೂ ಸುಧಾರಣೆಯಾಗುವುದಿಲ್ಲ. ಆದುದರಿಂದ ಸೆಲೆಕ್ಟ್ ಕಮಿಟಿಗೆ ಈ ಒಂದು ಅಧಿಕಾರವನ್ನು ಕೊಟ್ಟರೆ, ಉಳಿದಿರುವ ಸಮಸ್ಯೆಯನ್ನೂ ಪರಿಶೀಲಿಸಿ ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಈ ಅಧಿಕಾರವನ್ನು ಕೊಡಬೇಕೆಂದು ಸೂಚಿಸುತ್ತೇನೆ.

ಇನ್ನು ಇನಾಂದಾರರಿಗೆ ಕೊಡತಕ್ಕ ಪರಿಹಾರದ ವಿಷಯದಲ್ಲಿ ಹೇಳುವುದಾದರೆ, ಈಗಾಗಲೇ ಮೈಸೂರು ದೇಶದಲ್ಲಿ ಖೋತಾ ಬಡ್ಜೆಟ್ ಇದೆ. ಈ ಮಸೂದೆಯಲ್ಲಿ ಏನು ಪರಿಹಾರ ಕೊಡಬೇಕೆಂದು ಹೇಳಿದೆಯೋ ಅದು ಅನ್ಯಾಯವೆಂದು ನನ್ನ ಭಾವನೆ. ರಾಜ್ಯಾಂಗದಲ್ಲಿ ಏನೇ ಇದ್ದರೂ ಅದನ್ನು ಬದಲಾವಣೆ ಮಾಡುವುದಕ್ಕೆ ಅವಕಾಶವಿದೆ. ಹೀಗೆ ಮಾಡದಿದ್ದರೆ ದೇಶ ಮುಂದುವರಿಯುವುದಕ್ಕಾಗುವುದಿಲ್ಲ. ಈ ಪ್ಯಾರಾಸೈಟನ್ನು ತೆಗೆಯಬೇಕು. ಕಾಶ್ಮೀರದಲ್ಲಿ ಉಗ್ರವಾದ ಕ್ರಮವನ್ನು ತೆಗೆದುಕೊಂಡು ಭೂ ಸಮಸ್ಯೆಯನ್ನು ಯಾವ ರೀತಿ ಪರಿಹಾರ ಮಾಡಿದ್ದಾರೋ ಅದೇ ರೀತಿ ಮಾಡದಿದ್ದರೆ ಪ್ರಯೋಜನವಿಲ್ಲ. ರಾಜ್ಯಾಂಗ ಅಡ್ಡಿ ಬರಬಹುದು. ಅದಕ್ಕೆ ಪಾರ್ಲಿಮೆಂಟಿಗೆ ಹೇಳಿ ಸೂಕ್ತ ಬದಲಾವಣೆ ಮಾಡಿಸಬಹುದು. ಆ ರೀತಿ ಮಾಡದಿದ್ದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ಇನಾಂದಾರರಿಗೆ ಕೊಡತಕ್ಕ ಹಣ ಅನ್ಯಾಯ. ಅದರಲ್ಲಿಯೂ ಸಂಸ್ಥಾನದ ಬಡ್ಜೆಟ್ಟಿನಲ್ಲಿ ಖೋತಾ ಬರುತ್ತಿರುವಾಗ ಹೀಗೆ ಮಾಡುವುದು ಉಚಿತವಲ್ಲ. ಗಾಂಧೀಜಿ ತತ್ವಗಳ ಅನುಯಾಯಿಗಳಾದ ಡಾ॥ ಜೆ. ಸಿ. ಕುಮಾರಪ್ಪನವರು ಈ ದಿವಸ ಬಹಿರಂಗವಾಗಿ ಹೇಳಿದ್ದಾರೆ. "ಜಮೀನ್ದಾರಿ ರದ್ದು ಮಾಡುವುದು ದೇಶದ ಏಳಿಗೆಗೆ, ದೇಶದ ಉನ್ನತಿಗೆ ಬಹಳ ಮುಖ್ಯವಾದುದು. ಮೊದಲು ಇದಕ್ಕೆ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ; ಇದು ಆಗದಿದ್ದರೆ ದೇಶ ಉದ್ಧಾರವಾಗುವುದಿಲ್ಲ. ಜಮೀನ್ದಾರರಿಗೆ ಪರಿಹಾರ ಕೊಡುವುದು ನ್ಯಾಯವಲ್ಲ, ಅವರು ಇದುವರೆಗೆ ಬೇಕಾದಷ್ಟು ಉತ್ಪತ್ತಿ ಪಡೆದಿದ್ದಾರೆ; ಇಂಥವರಿಗೆ ಪರಿಹಾರ ಕೊಡುವುದು ನ್ಯಾಯವಲ್ಲ. ಈಗಿರತಕ್ಕ ರಾಜ್ಯಾಂಗದಲ್ಲಿ ಏನು ವಿಧಿಯಿದೆಯೋ ಅದನ್ನು ಬದಲಾವಣೆ ಮಾಡಬೇಕು; ಇಲ್ಲದಿದ್ದರೆ ರೈತರಿಗೆ ಯಾವ ಸಹಾಯವನ್ನೂ ಮಾಡಿದಂತಾಗುವುದಿಲ್ಲ; ನಾವು ಹೇಳುವುದೆಲ್ಲಾ ಬರಿಯ ಬಾಯಿಮಾತಾಗುತ್ತದೆ. ಮಾತಾಡುವಂತೆ ಕಾರ್ಯರೂಪದಲ್ಲಿ ತೋರಿಸಬೇಕಾದರೆ, ಪರಿಹಾರ ಕೊಡಬಾರದು. ಹೀಗೆ ಮಾಡಿದರೆ ರೈತರಿಗೆ ಅನುಕೂಲ ಮಾಡಿದಹಾಗಾಗುತ್ತದೆ, ಸರ್ಕಾರದ ಬೊಕ್ಕಸಕ್ಕೆ ಹಣ ಬರುತ್ತದೆ" ಎಂದು ಅವರು ಹೇಳಿದ್ದಾರೆ. ಇದನ್ನು ಗಮನಿಸಬೇಕು, ಮರೆಯಬಾರದು, ಏನೇ ಕಷ್ಟ ಬಂದರೂ ಈ ಒಂದು ವಿಷಯವನ್ನು ಪಾರ್ಲಿಮೆಂಟಿಗೂ ಇಂಡಿಯಾ ಸರ್ಕಾರದವರಿಗೂ ತಿಳಿಸಬೇಕು. ಅವರೂ ಕೂಡ ಕಾತುರರಾಗಿದ್ದಾರೆ. ಈ ಸಮಸ್ಯೆ ಪರಿಹಾರವಾಗದಿದ್ದರೆ ಪಂಚವಾರ್ಷಿಕ ಯೋಜನೆ-ಇದರ ವ್ಯಾಪ್ತಿ ಕಡಮೆಯಿದ್ದರೂ, ಈ ಪರಿಹಾರ ಕೊಡುತ್ತಾ ಹೋದರೆ ಇದನ್ನು ಸರಿಯಾಗಿ ಮಾಡುವುದಕ್ಕಾಗುವುದಿಲ್ಲ ಎಂಬುದನ್ನು ಅರಿತಿದ್ದಾರೆ.

ಒಟ್ಟಿನಲ್ಲಿ ಈ ಮಸೂದೆಯನ್ನು ವಿರೋಧಿಸಿ, ಸೆಲೆಕ್ಟ್ ಕಮಿಟಿಗೆ ಇದನ್ನು ಹಾಕಿದರೆ religious and charitable ಸಂಸ್ಥೆಗಳ ಇನಾಂಗಳನ್ನು ಸೇರಿಸುವ ಅಧಿಕಾರವನ್ನು ಅವರಿಗೆ ವಹಿಸಿಕೊಡಬೇಕೆಂದು ಕೇಳುತ್ತೇನೆ.

Mr. SPEAKER.—May I know why Sri B. V. Narayana Reddy did not move his resolution on the last occasion ?

Sri MULKA GOVINDA REDDY.—Please ask Sri Narayana Reddy ?

Mr. SPEAKER.—Was he not in your party ?

Sri MULKA GOVINDA REDDY.—He was absent, Sir; when actually called, he was absent.

Mr. SPEAKER.—So he was made to be absent !

*ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಅಧ್ಯಕ್ಷರೆ, ಈ ಇನಾಂರದ್ದಿಯಾತಿ ಬಿಲ್ಲಿನ ವಿಚಾರವಾಗಿ ಮಾತನಾಡುತ್ತಾ, ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ನಾನು ತಮ್ಮ ಮುಂದೆ ನಿಂತಿದ್ದೇನೆ. ಈ ಬಿಲ್ಲನ್ನು ತಯಾರುಮಾಡಿ ಸಕಾರದವರು ಇದನ್ನು ಇಂಗ್ಲಿಷ್‌ನಲ್ಲಿ ಮಾತ್ರ ಮುದ್ರಣ ಮಾಡಿದ್ದಾರೆ. ಕನ್ನಡದಲ್ಲಿಯೂ ಪ್ರತಿಗಳನ್ನು ಮುದ್ರಣ ಮಾಡಿಸಿದ್ದರೆ, ಕನ್ನಡ ತಿಳಿದವರು ಓದಿಕೊಂಡು ಸಲಹೆ ಕೊಡುವುದಕ್ಕೆ ಅನುಕೂಲವಾಗುತ್ತಿತ್ತು......

ಶ್ರೀ ಎಸ್. ಸಿದ್ದಪ್ಪ.—ಈ ಬಿಲ್ಲಿನ ವಿಷಯ ಮಾತನಾಡಬೇಕಾದರೆ ನನಗೆ ತಿಳಿದಿರುವ ಕೆಲವು ವಿಷಯಗಳನ್ನನುಸರಿಸಿಕೊಂಡು ಈ ಸಂದರ್ಭದಲ್ಲಿ ಒಂದೆರಡು ಮಾತು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಈ ಬಿಲ್ಲನ್ನು ತಂದಿರುವುದಕ್ಕಾಗಿ ಸರ್ಕಾರದವರನ್ನು ಮನಸಾರೆ ವಂದಿಸುತ್ತೇನೆ. ಹಿಂದೆ ಮಾಡಿದ್ದ ಸಮಿತಿಯವರು ಬಹಳ ಕಷ್ಟಪಟ್ಟು ವರದಿ ಮಾಡಿದಮೇಲೆ ಈ ಮಸೂದೆಯನ್ನು ನಮ್ಮ ಮುಂದೆ ತಂದಿದ್ದಾರೆ. ಅನೇಕ ಸದಸ್ಯರು ಈ ಬಿಲ್ಲಿನ ವಿಷಯದಲ್ಲಿ ವಿರೋಧವಾಗಿ ಮಾತನಾಡಿದಾರೆ. ಆದರೆ ಸರ್ಕಾರದವರು ಯಾವ ಬಿಲ್ಲನ್ನು ಮಂಡಿಸಿದರೂ ದೇವರೊಬ್ಬನಿದ್ದಾನೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳುವುದು ಒಳ್ಳೆಯದೆಂದು ತಿಳಿದಿದ್ದೇನೆ. ಇದುವರೆಗೆ ದೇವಸ್ಥಾನಗಳಿಗೆ ಮಠಗಳಿಗೆ ದೊಡ್ಡ ದೊಡ್ಡ ಸಂಸ್ಥೆಗಳಿಗೆ ಇನಾಂಗಳನ್ನು ಹಿಂದಿನ ಪ್ರಭುತ್ವಗಳವರು ಕೊಟ್ಟಿದ್ದಾರೆ. ಹಾಗೆ ಕೊಡುವಾಗ, ವಿಶೇಷ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ಕೊಟ್ಟಿದ್ದಾರೆ. ಈಗ ನಾವು ಈ ಬಿಲ್ಲನ್ನು ಕಾರ್ಯರೂಪಕ್ಕೆ ತರುವಾಗ ಹಿಂದಿನ ಸಂಪ್ರದಾಯವನ್ನು ಜ್ಞಾಪಕದಲ್ಲಿಟ್ಟುಕೊಂಡು ಹಿಂದಿನವರ ಉದ್ದೇಶಕ್ಕೂ, ದೇವಸ್ಥಾನ ಮಠಗಳ ಪುರೋಭಿವೃದ್ಧಿಗೂ ಕಳಂಕ ಬರದೇಯಿರುವ ಹಾಗೆ ಮಾಡುವುದು ಅತ್ಯಾವಶ್ಯಕ. ಹೀಗೆ ಮಾಡಿದರೆ ದೇವರೂ ಒಪ್ಪುತ್ತಾನೆಂದು ಸಭೆಯ ಮುಂದೆ ಹೇಳಲು ಸಂತೋಷಿಸುತ್ತೇನೆ.

(ಶ್ರೀ ಎಸ್. ಸಿದ್ದಪ್ಪ.)

ಇನಾಂದಾರರಿಗೆ ಹಣವನ್ನು ಪಾವತಿಮಾಡುವ ವಿಷಯದಲ್ಲಿ ನನ್ನ ಮಾನ್ಯಸ್ನೇಹಿತರಾದ ರಾಜಶೇಖರ ಮೂರ್ತಿಯವರು ಮತ್ತು ರಾಮರಾಯರು ಅಪ್ಪಣೆಕೊಡಿಸಿದ ಹಾಗೆ ಒಟ್ಟಿಗೆ ಕೊಡಬೇಕೆಂದು ಅಭಿಪ್ರಾಯಪಡುತ್ತೇನೆ.

Sri M. V. RAMA RAO.—I did not say so.

ಶ್ರೀ ಎಸ್ ಸಿದ್ದಪ್ಪ.—ಸಂಪ್ರದಾಯದಂತೆ ಅವರು ಕನ್ನಡದಲ್ಲಿ ಮಾತನಾಡಿದ್ದಿದ್ದರೆ ಚೆನ್ನಾಗಿತ್ತೆಂದು ಇದಕ್ಕೇ ನಾನು ಹೇಳಿದ್ದು.

ಇನಾಂದಾರಿ ಹಕ್ಕನ್ನು ಕಳೆದುಕೊಳ್ಳುವ ಜನರಿಗೆ ಮುಂದೆ ಅವರ ಜೀವನಕ್ಕೆ ಒಂದು ಮಾರ್ಗವನ್ನು ಕಲ್ಪಿಸಬೇಕಾಗುತ್ತದೆ; ಅದಕ್ಕಾಗಿ ಅವರಿಗೆ ಕೊಡ ತಕ್ಕದ್ದನ್ನು ಒಂದೇಸಾರಿ ಕೊಟ್ಟರೆ ಒಳ್ಳೆಯದು. ಹಾಗಿಲ್ಲದೆ ಬಾಂಡುಗಳನ್ನು ಕೊಡುವುದರಿಂದ ಅವರ ಪುರೋಭಿವೃದ್ಧಿಗೆ ಕಳಂಕ ಬರುತ್ತದೆ. ಇನಾಂದಾರರ ನೇಕರು ಈಗಾಗಲೇ ಚಾಕರಿ ಮಾಡಿಕೊಂಡಿದ್ದಾರೆ. ಅನೇಕರು ತಮ್ಮ ಗ್ರಾಮಕ್ಕೇ ಹೋಗುತ್ತಿಲ್ಲ. ಈ ಒಂದು ತೀರ್ಮಾನಕ್ಕೆ ಬರುವಾಗ ಎಲ್ಲಾ ಸರ್ಕಾರದವರಿಗೂ ಗೊತ್ತಿದೆ. ಇಂಥಾ ಸಂದರ್ಭದಲ್ಲಿ ವಿಷಯಗಳನ್ನೂ ಕೂಲಂಕಷವಾಗಿ ಪರ್ಯಾಲೋಚನೆ ಮಾಡಬೇಕಾದದ್ದು ನಮ್ಮ ಕರ್ತವ್ಯ.

ತೋಟಿ, ತಳವಾರ, ಬಡಗಿ, ನೀರುಗಂಟಿ, ಬಾರಾ ಬಲೂತಿ ಮುಂತಾದವು ಬಹಳ ಕಾಲದಿಂದ ಇವೆ. ಮುಂದೆ ಈ ಕಾನೂನನ್ನು ಅನುಷ್ಠಾನಕ್ಕೆ ತರುವಾಗ ಆಯಾ ಸಂದರ್ಭಗಳಿಗನುಸಾರವಾಗಿ ಉಳಿಸತಕ್ಕದ್ದಾಗಿವೆ. ಅನಾದಿಕಾಲದಿಂದ ಇವರುಗಳು ಅವರಿಗೆ ಕೊಟ್ಟಿರುವ ಭೂಮಿಯನ್ನು ಅನುಭವಿಸುತ್ತಿದ್ದಾರೆ. ಕಂದಾಯವನ್ನು ಪೂರ್ತಿ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಅವರು ಇವಕ್ಕೆ ಒಪ್ಪಿದ್ದಾರೆ ಹೀಗಿರುವಾಗ ಈ ಇನಾಮುಗಳನ್ನು ಪೂರ್ತಿಯಾಗಿ ತೆಗೆದು ಹಾಕುವುದು ಒಳ್ಳೆಯದಲ್ಲವೆಂದು ಹೇಳಬೇಕಾಗಿದೆ.

4 P.M.

ದೇವಸ್ಥಾನ ಮಠಮಾನ್ಯ ಇತ್ಯಾದಿಗಳಿಗೆ ಐದು ಹತ್ತು ಎಕರೆ ಜಮೀನುಗಳನ್ನು ಇನಾಂತಿ ಹಾಕಿಕೊಟ್ಟಿರತಕ್ಕ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಈ ಇನಾಂತಿಯನ್ನು ಅವುಗಳಿಗೆ ಹಾಕಿಕೊಟ್ಟಿರತಕ್ಕ ಕಾರಣವೇನೆಂದರೆ, ಆ ದೇವಸ್ಥಾನಗಳಲ್ಲಿರುವ ದೇವರಪೂಜೆ ಮಾಡತಕ್ಕ ಅರ್ಚಕರ ಜೀವನೋಪಾಯಕ್ಕೂ ಮತ್ತು ದೇವರ ಪೂಜಾದಿ ಕಾರ್ಯಗಳನ್ನು ನಡೆಸುವುದಕ್ಕೂ ಮತ್ತು ಆ ದೇವಸ್ಥಾನಗಳಿಗೆ ದೇವರ ಸೇವೆಗಾಗಿ ಬರತಕ್ಕ ಭಕ್ತಾದಿಗಳ ಅನುಕೂಲಕ್ಕೆ ಹಾಕಿಕೊಡಲಾಗಿದೆ. ಈ ಇನಾಂ ಜಮೀನುಗಳಿಂದ ಬರತಕ್ಕ ಆದಾಯದಲ್ಲಿ ಈಗ ನಾನು ಹೇಳಿರತಕ್ಕ ಕೆಲಸಗಳೆಲ್ಲಾ ನಡೆಯಬೇಕಾಗಿರುವುದರಿಂದ ಇವು ಅವುಗಳಿಗೆ ಆವಶ್ಯಕವಾಗಿ ಬೇಕೇಬೇಕಾಗಿವೆ. ಹೀಗಿರುವಾಗ ನಾವು ಈ ದಿವಸ ಅಂಥ ಇನಾಂ ಭೂಮಿಗಳನ್ನೆಲ್ಲಾ ಸರ್ಕಾರಕ್ಕೆ ತೆಗೆದುಕೊಂಡು ಬಿಟ್ಟರೆ, ಆ ದೇವಾಲಯಗಳಲ್ಲಿ ನಡೆಯಬೇಕಾಗಿರತಕ್ಕ ದೇವರಪೂಜೆ ಮತ್ತು ಅಲ್ಲಿಗೆ ಸೇವೆಗಾಗಿ ಬರುತ್ತಿದ್ದ ಜನರಿಗೆ ದೊರೆಯುತ್ತಿದ್ದ ಅನುಕೂಲ ತಪ್ಪಿಹೋಗುತ್ತವೆ. ಯಾವ ದೇವರದಯೆಯಿಂದಲೇ ಈದಿವಸ ಮಳೆ ಬೆಳೆಗಳು ಆಗುತ್ತಿವೆಯೋ, ಯಾವ ಒಂದು ದೇವರ ಅನುಗ್ರಹದಿಂದಲೇ ಈ ದಿವಸ ಈ ಸರ್ಕಾರ ಸ್ಥಾಪಿತವಾಗಿದೆಯೋ, ಯಾವ ದೇವರ ಅನುಗ್ರಹ ದಿಂದಲೇ ಈ ದಿವಸ ಇಂಥ ಆಡಳಿತಗಳೆಲ್ಲಾ ಒಂದು ಸುವ್ಯವಸ್ಥೆಯಿಂದ ನಡೆಯಲು ಅವಕಾಶವಾಗಿದೆಯೋ ಇಂಥ ದೇವರ ಪೂಜೆಯ ವಿಚಾರಕ್ಕೆ ಸಂಬಂಧಿಸಿದ ಒಂದು ಕಾನೂನನ್ನು ಮಾಡುವಾಗ ಸರ್ಕಾರ ಬಹಳ ದೂರದೃಷ್ಟಿಯಿಟ್ಟುಕೊಂಡು ಕಾನೂನು ಮಾಡುವುದು ಅವಶ್ಯಕವೆಂದು ಈ ಸಂದರ್ಭದಲ್ಲಿ ನಾನು ಈ ಒಂದು ವಿಷಯವನ್ನು ಹೇಳಬಯಸುತ್ತೇನೆ.

ಇನ್ನು ಅನೇಕಗ್ರಾಮಗಳಲ್ಲಿ ಜೋಡಿದಾರರೂ ಮತ್ತು ಇನಾಂದಾರರೂ ಅನೇಕರು, ದೊಡ್ಡ ದೊಡ್ಡ ಕೆರೆಗಳನ್ನೂ, ರಸ್ತೆ, ಬಾವಿ ಇತ್ಯಾದಿ ಅನೇಕ ಅನುಕೂಲ ಗಳನ್ನೂ ರೈತರಿಗೆ ಕಲ್ಪಿಸಿಕೊಟ್ಟಿದಾರೆ. ನಮ್ಮ ಮಾಗಡಿ ತಾಲ್ಲೂಕಿನಲ್ಲೇ ಅನೇಕ ಇನಾಂಗ್ರಾಮಗಳಿವೆ. ನಾನು ಖುದ್ದಾಗಿ ನೋಡಿದ್ದೇನೆ. ಆ ಗ್ರಾಮಗಳಲ್ಲಿ ಹಣ ಖರ್ಚುಮಾಡಿ ಅನೇಕ ಅನುಕೂಲಗಳನ್ನು ರೈತರಿಗೆ ಕಲ್ಪಿಸಿಕೊಟ್ಟಿದ್ದಾರೆ. ಇದೇ ವಿಚಾರವನ್ನು ಶ್ರೀಮಾನ್ ವಿ. ವೆಂಕಟಪ್ಪನವರೂ ಹೇಳಿದ್ದಾರೆ ಆದರೆ ಇನ್ನು ಕೆಲವು ಇನಾಂಗ್ರಾಮಗಳಲ್ಲಿ ಇಂಥಾ ಅನುಕೂಲಗಳನ್ನೇನೂ ಕಲ್ಪಿಸಿರುವುದಿಲ್ಲ. ಆದುದರಿಂದ ಈ ಜೋಡೀ ಮತ್ತು ಇನಾಂದಾರರುಗಳಿಗೆ ಪರಿಹಾರ ನೀಡತಕ್ಕ ಸಂದರ್ಭದಲ್ಲಿ ಅವರು ರೈತರಿಗೆ ಏನೇನು ಅನುಕೂಲಗಳನ್ನು ಯಾರು ಯಾರು ಕಲ್ಪಿಸಿಕೊಟ್ಟಿತ್ತಾರೆಂಬುದನ್ನು ಪರಿಶೀಲನೆ ಮಾಡಿ ಅನುಕೂಲ ಕಲ್ಪಿಸಿಕೊಟ್ಟಿರುವಂಥ ಜೋಡೀದಾರರಿಗೂ ಮತ್ತು ಇನಾಂದಾರರಿಗೂ ಕಾಂಪೆನ್‌ಸೇಷನ್ ಕೊಡತಕ್ಕದ್ದು ಅವಶ್ಯಕವೆಂದು ನಾನು ಹೇಳಬಯಸುತ್ತೇನೆ. ಕೆಲವು ಜೋಡೀದಾರರು ತಮ್ಮ ಜೋಡೀ ಗ್ರಾಮಗಳನ್ನು ಮಾರಾಟಮಾಡಿಕೊಂಡಿರುತ್ತಾರೆ. ಅವರಲ್ಲದೆ ಯಾರು ಕೆಲವರು ಮೊದಲಿಂದಲೂ ಏನೋ ಜಮೀನುಗಳನ್ನು 5–10 ಎಕರೆಗಳನ್ನು ಅನುಭವಿಸಿಕೊಂಡಿರುತ್ತಿದ್ದಾರೋ ಅಂಥಾ ಜಮೀನುಗಳನ್ನು ಅವರಿಗೇ ಬಿಟ್ಟುಕೊಡತಕ್ಕದ್ದು ಯುಕ್ತವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತವೆ.

ಇನ್ನು ನಮ್ಮ ಸಂಸ್ಥಾನದಲ್ಲಿ ಅನೇಕ ದೊಡ್ಡ ದೊಡ್ಡ ಇನಾಂದಾರರುಗಳೂ ಇದ್ದಾರೆ. ಇವರು ಅನೇಕ ರೀತಿಯಲ್ಲಿ ದೇಶಕ್ಕೆ ಸೇವೆ ಸಲ್ಲಿಸಿರುತ್ತಾರೆಂದು ಈಗಾಗಲೆ ಅನೇಕರು ಅಪ್ಪಣೆ ಕೊಡಿಸಿದ್ದಾರೆ. ಇವರ ವಿಚಾರದಲ್ಲಿ ಸರ್ಕಾರದವರೂ, ದೂರದೃಷ್ಟಿಯಿಟ್ಟು ಕೊಂಡು, ಅವರ ಹಕ್ಕುಬಾಧ್ಯತೆಗಳನ್ನು ಕಿತ್ತು ಕೊಳ್ಳುವಾಗ ಯಾರಿಗೂ ಅನಾನುಕೂಲವಾಗದ ರೀತಿಯಲ್ಲಿ ಕಾರ್ಯಗಳನ್ನು ಮಾಡಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ರಾಜಪ್ರಮುಖರಿಗೂ ಕೂಡ ಅವರಿಗೆ ಇಷ್ಟೇ ಆಸ್ತಿ ಇರಬೇಕು, ಅವರಿಗೆ ವರ್ಷಕ್ಕೆ ಇಷ್ಟೇ ಮೊಬಲಗನ್ನು ಕೊಡಬೇಕು ಎಂಬುದಾಗಿ ತೀರ್ಮಾನ ಮಾಡಿದ್ದಾರೆ. ಇದೇ ರೀತಿ ಈ ಇನಾಂದಾರರಿಗೂ ಕೂಡ ತಾವು ಈ ದಿವಸ ಅವರಿಂದ ಒಂದು ಹಕ್ಕನ್ನು ಸರ್ಕಾರಕ್ಕೆ ತೆಗೆದುಕೊಳ್ಳುವಾಗ ತಾವು ಅವರಿಗೆ ಏನು ಒಂದು ಅನುಕೂಲ ಪ್ರತ್ಯುಪಕಾರವಾಗಿ ತೋರಿಸುತ್ತೀರೆಂಬುದನ್ನು ನಿರ್ಧಾರಮಾಡುವುದು ಒಳ್ಳೆಯದು. ತಾವು ಹೀಗೆ ಮಾಡುವುದರಿಂದ ಯಾರೊಬ್ಬರಿಗೂ ಅನಾನುಕೂಲವಾಗುವುದಿಲ್ಲ. ಈ ದಿವಸ ಅನೇಕ ಜೋಡೀದಾರರು "ಈ ಇನಾಂರದ್ದಿಯಾತಿ ಬಿಲ್ಲನ್ನು ಯಾವಾಗ ತರುತ್ತೀರಿ, ತಾವು ಆ ಬಿಲ್ಲನ್ನು ಎಷ್ಟು ಜಾಗ್ರತೆಯಾಗಿ ತಂದರೆ 'ನಮಗೆ ಅಷ್ಟು ಒಳ್ಳೆಯದಾಗುತ್ತದೆ ಎಂದು ಕೇಳುತ್ತಿದ್ದಾರೆ" ಈ ಮಸೂದೆಯನ್ನು ತಾವು ತರತಕ್ಕ ವಿಷಯದಲ್ಲಿ

ಅವರೂ ಕೂಡ ಬಹಳ ಸಂತೋಷ ಭರಿತರಾಗಿದ್ದಾರೆ. ಆದುದರಿಂದ ತಾವು ಈಗ ಈ ಬಿಲ್ಲನ್ನು ಸೆಲೆಕ್ಟ್ ಸಮಿತಿಯ ಮುಂದೆ ಕಳುಹಿಸತಕ್ಕವರಾಗಿರುವುದರಿಂದ, ಅಲ್ಲಿಗೆ ಈ ಬಿಲ್ಲು ಹೋದಾಗ ಅವರು ಇದನ್ನು ಬಹಳ ಗಮನಾರ್ಹವಾದ ರೀತಿಯಲ್ಲಿ ತಿದ್ದುಪಡಿಮಾಡಿ ಇದು ಪ್ರತಿಯೊಬ್ಬರಿಗೂ ಆಕರ್ಷಣೀಯವಾಗಿರತಕ್ಕ ರೀತಿಯಲ್ಲಿ ಪುನಃ ಈ ಸಭೆಯ ಮುಂದೆ ಬರುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಜನರಿಗೆ ಉಪಯುಕ್ತ ಕೆಲಸಗಳನ್ನು ಮಾಡಬೇಕೆಂಬ ಧ್ಯೇಯವೇ ಈ ನಮ್ಮ ಕಾಂಗ್ರೆಸ್ ಸರ್ಕಾರದ ಧ್ಯೇಯವಾಗಿರುವುದರಿಂದ, ತಾವು ಯಾರೊಬ್ಬರಿಗೂ ತೊಂದರೆಯಾಗದ ರೀತಿಯಲ್ಲಿ ಈ ಕಾನೂನು ಇರುವಹಾಗೆ ಮಾಡಬೇಕಾಗಿದೆ. 'ಏನಪ್ಪಾ, ಈ ಕಾಂಗ್ರೆಸ್ಸಿನವರು ಬಂದು ನಮ್ಮ ಹಕ್ಕುಗಳನ್ನೆಲ್ಲಾ ಕಿತ್ತುಕೊಂಡರು, ಎಂಬುದಾಗಿ ಯಾರೊಬ್ಬರೂ ದೂಷಣೆ ಮಾಡಲು ಅವಕಾಶವಿಲ್ಲದ ರೀತಿಯಲ್ಲಿ ತಾವು ಇದನ್ನು ಮಾಡಬೇಕೆಂದು ಸಲಹೆ ನೀಡುತ್ತೇನೆ. ತಾವು ಹೀಗೆ ಮಾಡುವಾಗ ಯಾರು ಯಾರಿಗೆ ಏನೇನು ಹಕ್ಕುಗಳನ್ನು ಕೊಡಬೇಕು, ಯಾರುಯಾರಿಗೆ ಏನೇನು ಪ್ರತಿಫಲವನ್ನು ನೀಡಬೇಕು, ಯಾವ ಯಾವ ಇನಾಂದಾರರು, ಮತ್ತು ಜೋಡೀದಾರರು ಉಪಯುಕ್ತ ಕೆಲಸಗಳನ್ನು ಮಾಡಿದ್ದಾರೆ, ಸಂಘ ಅಥವಾ ಸಂಸ್ಥೆ ಯಾವ ಮಠಮಾನ್ಯಗಳು ಸರಿಯಾಗಿ ನ್ಯಾಯಬದ್ಧವಾಗಿ ಏನೇನು ಕೆಲಸಕಾರ್ಯಗಳನ್ನು ಮಾಡಬೇಕಾಗಿರುತ್ತದೆಯೋ ಅವುಗಳನ್ನು ಮಾಡುತ್ತಿವೆಯೋ ಅಥವಾ ಇಲ್ಲವೋ ಎಂಬ ಈ ಪ್ರತಿಯೊಂದು ಅಂಶಗಳನ್ನು ನಾವು ಗಮನದಲ್ಲಿಟ್ಟುಕೊಂಡು, ಇವುಗಳನ್ನೆಲ್ಲಾ ಚೆನ್ನಾಗಿ ಮತ್ತೊಮ್ಮೆ ಪರಿಶೀಲನೆ ಮಾಡಿ ಯಾರು ಯಾರಿಗೆ ಏನೇನು ಬಿಡಬೇಕೋ ಅವುಗಳನ್ನೆಲ್ಲಾ ಬಿಟ್ಟುಬಿಡಲು ಅವಕಾಶವಿರುವಂತೆ ತಾವು ಈ ಮಸೂದೆಯನ್ನು ತಯಾರಿಸಬೇಕಾಗಿರುತ್ತದೆಂದು ನಾನು ಈ ಸಂದರ್ಭದಲ್ಲಿ ತಮಗೆ ಸೂಚನೆ ಕೊಡುತ್ತೇನೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಅನೇಕ ವರ್ಷಗಳಿಂದ ಈ ಮಠ ಮಾನ್ಯಗಳು ನಡೆದುಕೊಂಡು ಬರುತ್ತಿವೆ. ಪ್ರತಿಯೊಂದು ವಿಚಾರದಲ್ಲೂ ಈ ಸಂಸ್ಥಾನ ಮಾದರಿ ಸಂಸ್ಥಾನವೆಂಬ ಹೆಸರನ್ನು ಪಡೆದುಕೊಂಡುಬಂದಿದೆ. ನಮ್ಮ ಸಂಸ್ಥಾನಕ್ಕೆ ಈ ಮಾದರಿ ಎಂಬ ಹೆಸರು ಇನ್ನು ಮುಂದೆಯೂ ಮುಂದುವರಿದುಕೊಂಡು ಬರುವಂತೆ ತಾವು ಈ ಬಿಲ್ಲನ್ನು ತಯಾರಿಸಬೇಕೆಂದು ತಮ್ಮಲ್ಲಿ ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲಿಯತನಕ ಈ ಜೋಡಿ ಮತ್ತು ಇನಾಂದಾರಗಳ ಬಗ್ಗೆ ಮತ್ತು ಗುರುಹಿರಿಯರು ಈ ಹಿಂದಿನಿಂದಲೂ ನಡೆಸಿಕೊಂಡುಬಂದಿರುವಂಥಾ ಮಠ ಮಾನ್ಯ ಮತ್ತು ಧರ್ಮ ಸಂಸ್ಥೆಗಳ ಬಗ್ಗೆ ಅವರ ಮನೋಸಂಕಲ್ಪಕ್ಕೆ ವಿರೋಧವಾಗದ ರೀತಿಯಲ್ಲಿ ಮತ್ತು ಅವರ ಮನಸ್ಸಿಗೊಂದು ನೋವಾಗದ ರೀತಿಯಲ್ಲಿ ಈ ಮಸೂದೆಯನ್ನು ತಯಾರಿಸಬೇಕೆಂದು ಹೇಳಿ ನನ್ನ ಅಭಿಪ್ರಾಯಗಳನ್ನು ಸಭೆಯಲ್ಲಿ ಸೂಚಿಸುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಸಭಾಧ್ಯಕ್ಷರಿಗೂ, ಸರ್ಕಾರದವರಿಗೂ ಮತ್ತು ಈ ಮಾನ್ಯ ಸಭೆಯ ಸದಸ್ಯರಿಗೂ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*Sri A. BHEEMAPPA NAIK (Molakalmuru).—In view of the large section giving their opinion that the other inams also may be included in the Bill, would it not be desirable to give a direction to the Select Committee that this aspect also may be considered, because there have been decisions in the Parliament that the Select Committee can go into certain proposals which are not directly involved but analogous to them? Can we not give a direction to the Select Committee to go into this aspect and send its opinion to this House? That would be very useful, of course, if the Government have no objection.

Mr. SPEAKER.—I do not know. Granting that the Government are for it, it is a matter which we will have to consider seriously. If it is opposed to the principles of the original Bill, that becomes a matter for serious consideration.

Sri A. BHEEMAPPA NAIK.—I submit that it is not opposed to the principles of the original Bill. They are almost the same. The Statement of Objects and Reasons may just differ. If the Government have no objection, the Select Committee may just be given a direction to consider this aspect and send its opinion to the House.

Mr. SPEAKER.—For what purpose?

Sri A. BHEEMAPPA NAIK.—If this amendment could be made without offending the Statement of Objects and Reasons and the principles, that could be done so as to include other inams also, because formerly both these were united and a Bill was brought with the Statement of Objects and Reasons. Unfortunately it could not be brought before the House as it lapsed. Therefore I think that the Statement of Objects and Reasons could include religious inams also and I also think that it will not differ from the principles involved in the present Bill. So, if the Government have no objection, the Select Committee could be directed to amend the present Bill suitably.

Sri V. VENKATAPPA.—It is not possible, because the scope of the Bill then becomes wider. I do not think the Select Committee could do that; besides it has to be published in the gazette.

Sri H. K. VEERANNA GOWDH (Maddur).—Now, the scope of the Bill is limited. Sri Bheemappa Naik's suggestions are that the scope of the Bill may be extended to religious inams also. It does not necessarily involve any opposition to the fundamentals of the present Bill.

Mr. SPEAKER.—To be frank, I require a little time to consider all these aspects. At present I feel that it will not be very desirable to refer the Bill to the Select Committee with such a direction. I think that it may be opposed to the principles of the original Bill. The question is raised all of a sudden and I would require time to study the question and give a considered ruling.

Sri MULKA GOVINDA REDDY.—This may be continued tomorrow.

Mr. SPEAKER.—Tomorrow we have non-official business. We may continue this some other day. If the House is really very serious and keen about this matter, we will have to continue this debate some other day.

Sri KADIDAL MANJAPPA.—It is a constitutional issue. The Speaker has to decide that issue. Government are bound by the majority view expressed here.

Mr. SPEAKER.—That constitutional aspect I will have to consider. That is what I mean.

Sri H. K. VEERANNA GOWDH.—That means Government have no objection.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸರ್ಕಾರದವರ ಅಭಿಪ್ರಾಯದಲ್ಲಿ ಈ ರಿಲಿಜಿಯಸ್ ಇನ್‌ಸ್ಟಿಟ್ಯೂಷನ್ನುಗಳನ್ನೂ ಈ ಬಿಲ್ಲಿನಲ್ಲೇ ಸೇರಿಸಿದ್ದರೆ ಅನುಕೂಲವಾಗುತ್ತಿರಲಿಲ್ಲವೇ ಎಂಬ ಬಗ್ಗೆ ಅವರೇನು ಅಭಿಪ್ರಾಯಪಟ್ಟಿದ್ದಾರೋ ಅದು ತಿಳಿಯಲಿಲ್ಲ. ಅದರ ಈ ರಿಲಿಜಿಯಸ್ ಇನ್‌ಸ್ಟಿಟ್ಯೂಷನ್‌ಗಳನ್ನು ಇದರಲ್ಲೇ ಅಡಕವಾಗುವಂತೆ ಮಾಡಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುವುದು ಉತ್ತಮವಾದುದೆಂದು ನನಗೆ ತೋರುತ್ತದೆ.

Mr. SPEAKER.—Tomorrow and the day-after we have non-official business—Resolutions and one non-official Bill. If the House is really keen, we will consider it on the third day and decide. So, we will continue the debate on that day.

Sri KADIDAL MANJAPPA.—I may be permitted to reply to the debate to-day. The next motion will be for referring the matter to the Select Committee.

Mr. SPEAKER.—I think I will have to consider the whole thing seriously. The Hon'ble Minister may reply on the third day. Sri G. Sivappa will now speak.

ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಮಾನ್ಯ ಅಧ್ಯಕ್ಷರೇ, ಈ ಬಿಲ್ಲನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ಮಸೂದೆಯನ್ನು ತಂದಿರುವುದರಿಂದ ನಮ್ಮ ಕಾಂಗ್ರೆಸ್ ಸರ್ಕಾರ ಒಂದು ದೊಡ್ಡ ಕೀರ್ತಿಯನ್ನು ಪಡೆದುಕೊಂಡಂತಾಗಿದೆ. ಆದರೆ ನಾನು ಈಗ ಈ ಮಸೂದೆಯ ಪ್ರತಿಯೊಂದು ಅಂಶಗಳಿಗೂ ಹೆಚ್ಚಿನ ಗಮನಕೊಡದೆ ಈ ಮಸೂದೆಯ ವಿಚಾರವಾಗಿ ದೇಶದಲ್ಲಿರತಕ್ಕ ಮಹಾಜನರ ಅಭಿಪ್ರಾಯ ಹೇಗಿದೆ ಎಂಬುದರ ಬಗ್ಗೆ ಒಂದೆರಡು ಮಾತುಗಳನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಮಸೂದೆಯು ಒಂದು ಕಾನೂನಾಗಿ ದೇಶದಲ್ಲಿ ಜಾರಿಗೆಬಂದಮೇಲೆ ಇನಾಂದಾರರು, ಜೋಡಿದಾರರು ಎಂಬತಕ್ಕವರು ಯಾರೂ ಇರುವುದಕ್ಕೆ ಅವಕಾಶವಿರುವುದಿಲ್ಲ. ಈಗಾಗಲೇ ಕೆಲವು ಮಾನ್ಯಸದಸ್ಯರು ಮಾತನಾಡುತ್ತ ಈ ಮಾನ್ಯಸಭೆಯ ಗಮನಕ್ಕೆ ಒಂದು ಅಂಶವನ್ನು ತಂದಿದ್ದಾರೆ. ಅದು ಏನೆಂದರೆ, ಜೋಡಿದಾರರೂ ಮತ್ತು ಇನಾಂದಾರರೂ ಇಲ್ಲಿಯವರೆಗೆ ಇದ್ದುದ್ದು ಯೂರೋಪ್‌ದೇಶದಲ್ಲಿ ಒಂದು ಫ್ಯೂಡರ್ ಸಿಸ್ಟಂ ಇದ್ದಹಾಗೆ ಇತ್ತೆಂದು ತಿಳಿಸಿದ್ದಾರೆ. ಹೀಗೆ ನಮ್ಮ ಇಂಡಿಯಾದೇಶದಲ್ಲಿದ್ದ ಈ ಒಂದು ಫ್ಯೂಡರ್‌ಸಿಸ್ಟಂನಿಂದ ರೈತರಿಗೆ ಏನೇನು ಕಷ್ಟಗಳು ಮತ್ತು ಬಾಧೆಗಳಾಗುತ್ತಿದ್ದುವೆಂಬ ಬಗ್ಗೆ ಈ ಮಸೂದೆಯಲ್ಲಿ ಏನು ವ್ಯತ್ಯಾಸವಾಗಿದೆಯೋ ಅದಕ್ಕಿಂತಲೂ ಹೆಚ್ಚಿನ ವಿಚಾರಗಳು ಇನ್ನೂ ಅನೇಕವಾಗಿರುತ್ತವೆ. ಅವುಗಳೆಲ್ಲವನ್ನೂ ಈಗಾಗಲೇ ಅನೇಕ ಸದಸ್ಯರು ಸಭೆಯ ಗಮನಕ್ಕೆ ತಂದಿದ್ದಾರೆ. ಇಲ್ಲಿಯ ತನಕ ಅಲ್ಲಿಯ ರೈತರು ಯಾರು ಈ ಜೋಡಿ ಮತ್ತು ಇನಾಂಗ್ರಾಮಗಳ ಹಿಡಿವಳಿಯಲ್ಲಿ ಸಿಕ್ಕಿಕೊಂಡಿದ್ದಾರೋ ಅಂಥವರೆಲ್ಲರೂ ಏನೇನು ಕಷ್ಟನಷ್ಟಗಳನ್ನು ಅನುಭವಿಸಿರುತ್ತಾರೆ ಎಂಬ ವಿಚಾರವನ್ನು ನಾನು ಕಣ್ಣಾರೆನೋಡಿದ್ದೇನೆ. ಅನೇಕ ಜೋಡಿ ಮತ್ತು ಇನಾಂತಿಗಳು 2-3 ಕೈದಾಟ ಕ್ರಯವಾಗಿ ಹೋಗಿರುತ್ತವೆ. ಆ ರೈತರುಗಳಿಂದ ವಸೂಲ್ಮಾಡಿಕೊಂಡ ಕಂದಾಯ ಇತ್ಯಾದಿಗಳ ಬಗ್ಗೆ ಯಾವ ಒಂದು ದಾಖಲೆಯನ್ನು ಕೊಟ್ಟಿರುವುದಿಲ್ಲ. ಇಂಥ ಅನ್ಯಾಯಗಳೂ ಅಕ್ರಮಗಳೂ ಎಷ್ಟೋ ನಡೆದಿರುತ್ತವೆ. ಉದಾಹರಣೆಗೆ ಹೇಳುವುದಾದರೆ—ನಮ್ಮದೇ ಒಂದು ವೈಯ್ಯಕ್ತಿಕ ವಿಚಾರತೆಗೆದುಕೊಳ್ಳಬಹುದು. ಒಬ್ಬ ಇನಾಂದಾರರು ನಮ್ಮ ತಂದೆಯವರಿಗೆ ಒಂದು ಜಮೀನನ್ನು ಮಾರಾಟಮಾಡಿದ್ದಾರೆ. ಅದೇ ಜಮೀನನ್ನು

ಇನ್ನೊಬ್ಬ ಇನಾಂದಾರ ಮತ್ತೊಬ್ಬರಿಗೆ ಮಾರಾಟ ಮಾಡಿದ್ದಾರೆ. ಹೀಗೆಲ್ಲಾ ಅನೇಕ ನ್ಯೂನಾತಿರಿಕ್ತಗಳು ಆ ಇನಾಂ ಜಮೀನುಗಳ ಬಗ್ಗೆ ಉಂಟಾಗಿರುತ್ತವೆ. ಈ ದಿವಸ ಸರ್ಕಾರದವರು ಅವರಿಂದ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಬೇಕಾಗಿದ್ದರೆ ಯಾವ ಜಮೀನು ರೈತನ ವಶದಲ್ಲಿದೆ, ಯಾವ ಇನಾಂದಾರನ ವಶದಲ್ಲಿದೆ ಎಂಬುದನ್ನು ಕಂಡುಹಿಡಿಯುವುದೇ ತುಂಬ ಕಷ್ಟವಾಗಿರುತ್ತದೆ. ನಾವೇ ಅನೇಕ ಜಮೀನುಗಳನ್ನು ಇನಾಂದಾರರಿಂದ ಕೊಂಡಿರುತ್ತೇವೆ. ಅನೇಕ ಇನಾಂ ಗ್ರಾಮಗಳಲ್ಲಿ ಯಾವ ಒಂದು ಅಭಿವೃದ್ಧಿ ಕಾರ್ಯಗಳನ್ನಾಗಲಿ ಮಾಡಿರುವುದಿಲ್ಲ. ಈ ಸಭೆಯಲ್ಲಿ ನನ್ನ ಅಭಿಪ್ರಾಯಕ್ಕೆ ಯಾರೂ ವಿರೋಧಿಸಲಾರರೆಂದು ನಾನು ಭಾವಿಸುತ್ತೇನೆ.

ಇನ್ನು ಸರ್ಕಾರದವರು ಈ ಮತೀಯ ಸಂಸ್ಥೆಗಳ ಬಗ್ಗೆ ಒಂದು ವಿನಾಯಿತಿ ತೋರಿಸಿರುವುದಾಗಿ ಭಾವಿಸಿದ್ದಾರೆ. ಆದರೆ ಅಂಥ ವಿನಾಯಿತಿ ತೋರಿಸತಕ್ಕ ಅಗತ್ಯವಿದ್ದಂತೆ ಕಂಡುಬರುತ್ತಿಲ್ಲ. ಕಳೆದ 2-3 ದಿವಸಗಳಿಂದಲೂ ಹೊರಗಡೆ ಏನೇನೋ ವಿಚಾರಗಳು ನಡೆಯುತ್ತಿವೆ. ಎಲ್ಲರೂ ಏಕಾಭಿಪ್ರಾಯದಿಂದ ಈ ಮತೀಯ ಸಂಸ್ಥೆಗಳಿಗೆ ಕೊಟ್ಟಿರತಕ್ಕ ಇನಾಂತಿಗಳನ್ನು ವಾಪಸ್ಸು ತೆಗೆದುಕೊಳ್ಳಲು ಒಂದು ಬೆಂಬಲನೀಡದಿದ್ದರೆ ಪ್ರಜಾರಾಜ್ಯದಲ್ಲಿ ನಾವು ತುಂಬಾ ಅನ್ಯಾಯಮಾಡಿದಂತಾಗುತ್ತದೆ. ಆದುದರಿಂದ ಇವುಗಳೆಲ್ಲವನ್ನೂ ಕೂಡಲೇ ಲೆಜಿಸ್ಲೇಷನ್ನಿಗೆ ಒಳಪಡಿಸಬೇಕೆಂದು ಹೇಳುತ್ತೇನೆ. ಶ್ರೀ ಸಿದ್ದಪ್ಪನವರು ಏನೋ ಒಂದು ಸಾಂಪ್ರದಾಯಕವಾಗಿ, ಅವರು ಮಹಾ ಭಕ್ತವಂತರಾಗಿರುವುದರಿಂದ ಆ ರೀತಿ ಕೆಲವು ಮಾತುಗಳನ್ನು ಹೇಳಿದ್ದಾರೆಂದು ನಾನು ಭಾವಿಸುತ್ತೇನೆ.

ನಮ್ಮ ಶ್ರೀ ರಾಮರಾಯರು ಬಹಳ ಗಹನವಾದ ವಿಚಾರವನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಖಂಡಿತವಾಗಿಯೂ ಅವರ ಮಾತು ನಮಗೆ ಬಹಳ ಹರ್ಷದಾಯಕವಾಗಿತ್ತು. ಆದ್ದರಿಂದ ಸರ್ಕಾರದವರು ಈ ರೀತಿಯ fuedal system ಇರಕೂಡದೆಂದು ಯೋಚನೆ ಮಾಡಿದಮೇಲೆ, ಅದರಲ್ಲೂ ಈ ಕಾಲದಲ್ಲಿ 500 ಎಕರೆ, 300 ಎಕರೆಗಳು ಇರುವವರ ಜಮೀನುಗಳನ್ನೇ ಹಂಚಬೇಕೆಂದಿರುವ ಈ ಸಂದರ್ಭದಲ್ಲಿ ಇನಾಂ ಪದ್ಧತಿಯನ್ನು ಇಟ್ಟುಕೊಳ್ಳಬೇಕೆಂಬುದು ಬಹಳ ಶೋಚನೀಯ. ಆದಷ್ಟು ಮಟ್ಟಿಗೆ economic holdings ಗಳನ್ನೇ ಏರ್ಪಡಿಸಬೇಕು, ಒಂದೊಂದು ಸಂಸಾರಕ್ಕೆ 25 ಎಕರೆ, 50 ಎಕರೆಗಳಿಗೆಮೇಲ್ಪಟ್ಟು ಇರಕೂಡದೆಂದು ಯೋಚನೆ ಮಾಡತಕ್ಕಂಥ ಈ ಕಾಲದಲ್ಲಿ ಇನಾಂದಾರರುಗಳನ್ನು ಮತ್ತು ಜೋಡಿದಾರರುಗಳನ್ನು ಇಟ್ಟುಕೊಳ್ಳಬೇಕೆಂಬುದು ಖಂಡಿತವಾಗಿಯೂ ಈಗಿನ ಕಾಲಕ್ಕೆ ಸರಿಹೋಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಜನಾಭಿಪ್ರಾಯವೂ ಬಹುಮಟ್ಟಿಗೆ ಇದೇ ಆಗಿದೆಯೆಂದು ನಾನು ತಿಳಿದಿದ್ದೇನೆ. ನಮ್ಮ ರೆವೆನ್ಯೂ ಮಂತ್ರಿಗಳೂ ಕೂಡ ಅದೇ ಅಭಿಪ್ರಾಯವುಳ್ಳವರಾಗಿದ್ದಾರೆ. ಇಷ್ಟು ವಿಚಾರಗಳನ್ನು ನಾನು ಸಭೆಯ ಗಮನಕ್ಕೆ ತಂದು ಅತಿ ಜಾಗ್ರತೆ ಈ ಬಿಲ್ಲನ್ನು pass ಮಾಡಬೇಕೆಂದು ನಾನು ಸರ್ಕಾರದವರಿಗೆ ಮನವಿಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಅಧ್ಯಕ್ಷರೇ, ಈ ಇನಾಂತಿ ರದ್ದಿಯಾತಿ ಬಿಲ್ಲನ್ನು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ 4-5 ವರ್ಷದ ಮೇಲಾದರೂ ತಂದದ್ದಕ್ಕಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಮುಖ್ಯವಾಗಿ ಈಗಿನ ಸ್ಥಿತಿಯಲ್ಲಿ ಇನಾಂ ಗ್ರಾಮಗಳ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಎಲ್ಲಾ ಜೋಡಿ ಇನಾಂತಿಗಳು ಇದೇ ರೀತಿಯಲ್ಲಿವೆಯೆಂದು ಹೇಳುವುದಕ್ಕೆ ಸಾಧ್ಯವಿಲ್ಲದಿದ್ದರೂ ಬಹುಸಂಖ್ಯೆಯ ಜೋಡಿ ಇನಾಂ ಗ್ರಾಮಗಳು ತೀರ ಕಷ್ಟ ಪರಿಸ್ಥಿತಿಯಲ್ಲಿರುವುದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತೇಯಿದೆ. ಅಂಥದ್ದರಲ್ಲೂ ಜೋಡಿ ಇನಾಂತಿಗಳ ಬಗ್ಗೆ ಅವರುಗಳು ತಂದಿರುವ ಬಿಲ್ಲಿನ ರೀತಿಯನ್ನು ನೋಡಿದರೆ ಅವರೇಕೆ ಇಷ್ಟು ಭಯದಿಂದ ತಂದಿದ್ದಾರೋ ಎಂಧೆನಿಸುತ್ತಿದೆ. ಸರ್ವೀಸ್ ಇನಾಂ ಮತ್ತು religious ಇನಾಂತಿಗಳನ್ನು ಇಲ್ಲಿ ಸೇರಿಸದೆ ಇರುವ ರೀತಿಯಲ್ಲಿ ಅವರು ಈ ಮಸೂದೆಯನ್ನು ತಂದಿರುವುದು ಬಹಳ ಶೋಚನೀಯ. ಈಗಲಾದರೂ ಇದು ಸೆಲೆಕ್ಟ್ ಕಮಿಟಿಗೆ ಹೋದಾಗ, ಅಲ್ಲಿ ಈ ಸರ್ವಿಸ್ ಇನಾಂತಿಗಳಿಗೂ ಹಾಗೂ ಧಾರ್ಮಿಕ ಇನಾಂತಿಗಳಿಗೂ ಸಂಬಂಧಪಟ್ಟಂತೆ ಈ ಮಸೂದೆಯನ್ನು ಬದಲಾಯಿಸತಕ್ಕದ್ದು ನಮ್ಮ ಸರ್ಕಾರದ ಮುಖ್ಯ ಕರ್ತವ್ಯವೆಂದು ಭಾವಿಸುತ್ತೇನೆ. ಈ ಸಭೆಯ ಸದಸ್ಯರುಗಳನೇಕರು ಇದೇ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ಬಹಳ ಸೂಕ್ತವೂ ಸಮಯೋಚಿತವೂ ಆಗಿದೆ.

ಇನ್ನು ಜೋಡಿದಾರರುಗಳಿಗೆ ಮತ್ತು ಇನಾಂದಾರರುಗಳಿಗೆ ಪರಿಹಾರವನ್ನು ಕೊಡತಕ್ಕ ವಿಷಯ ನಮ್ಮ ಈಗಿನ ರಾಜ್ಯಾಂಗಕ್ಕನುಗುಣವಾಗಿದೆ. ಆದರೆ ಇದರಲ್ಲಿ ಗೊತ್ತುಮಾಡಿರುವ ಮೊಬಲಗು ಸ್ವಲ್ಪಮಟ್ಟಿಗೆ ಜಾಸ್ತಿಯೆಂದು ತೋರುತ್ತದೆ. ಇದನ್ನು ಆದಷ್ಟು ಕಡಿಮೆಮಾಡಿ ಇನ್ನು ನಾಲ್ಕೈದು ತಿಂಗಳುಗಳಲ್ಲೇ ನಮ್ಮ ಮೈಸೂರು ದೇಶದಲ್ಲಿ ಕಾನೂನಾಗಿ ಜಾರಿಗೆಬರುವಂತೆ ಮಾಡಬೇಕಾದದ್ದು ನಮ್ಮ ಪ್ರಜಾಸರ್ಕಾರದ ಕರ್ತವ್ಯ. Religious ಮತ್ತು Charitable ಇನಾಂತಿಗಳನ್ನು ಇನ್ನು ಬಿಲ್ಲಿನಲ್ಲಿ ಸೇರಿಸದೆಬಿಟ್ಟಿರುವುದು ಅವುಗಳು ಮಾಡತಕ್ಕ ಮತಭೋಧನೆಗಳಿಗೆ ಆಶ್ರಯಕೊಟ್ಟು communal feelings ಜಾಸ್ತಿಯಾಗಲು ಅವಕಾಶಕೊಟ್ಟಂತಾಗುತ್ತದೆ. ಅವುಗಳಿಂದ ನಿಜವಾಗಿ ದೇಶಕ್ಕೆ ಯಾವುದೇ ವಿಧವಾದ ಸೇವೆ ಸಲ್ಲುತ್ತಿದೆಯೆಂಬುದು ಅನುಮಾನ. ಆದ್ದರಿಂದ ಇವುಗಳಿಗಾಗಿ ಒಂದು ತಿದ್ದುಪಡಿಯನ್ನು ತಂದು ಆದಷ್ಟು ಬೇಗನೆ ಈ ಮಸೂದೆಯನ್ನು pass ಮಾಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ. •

*Sri M. PALANIYAPPAN (Ulsoor).—Mr. Speaker, Sir, "old order changeth yielding place to new"; so also old inamdari system, jodi and all that should go. In the year 1948 this Bill was before the Government and was being referred to the Select Committee. It is again coming back to the Legislature and to-day it is before us to see that it is implemented. We the Members of this House are very proud and fortunate to see that this Bill is implemented. It is a revolutionary period, so to say. "The tiller of the soil is to be made the owner" is the motto that is being propagated everywhere, and when this intermediary system should go and people are trying just to implement that policy, I think it is high time

(SRI M. PALANIYAPPAN.)

that they should go ahead with the abolition of the inams and other jodis. I congratulate the Minister for having introduced this Bill and taking so much keen interest in this matter of abolition of these inams. As other members have said, I need not dilate much on the harassment caused by the inamdars to the raiyats. If really we are doing any good to the peasants, the abolition of these inams stands first. As I know, there are so many inam villages in the Corporation area on which I have recently put an interpellation also. I think these people are between the devil and the deep sea. On the one side they cannot get their plans sanctioned. On the other side, the inamdars never gave permission to build any houses. These raiyats have got no opportunity of doing things even though they just toil on their lands. So this Inam Bill has been introduced just to help these raiyats and also to give relief to them. So I congratulate the Government for having brought this Bill and I welcome it wholeheartedly.

Sri KADIDAL MANJAPPA.—Regarding the points raised by Sri Bheemappa Naik, I have pondered over the question and I wish to say a few words so that the Hon'ble Members may know the view of the Government. There are some difficulties in this matter. The principles that we have adopted in this Bill cannot be applied in the case of religious inams, because there are large as well as small temples endowed with inam lands. The maintenance of these small institutions is carried on with the help of the income that these institutions are getting. In some cases, the lands endowed to the temples do not exceed even five acres. The temples are being maintained with the *gutta* that the tenants are paying now. If the inam lands are resumed, what should happen to these temples, who is to maintain these temples, is the question that arises. Of course, the principles that have been adopted in this Bill can be adopted in the case of Sringeri Jahagir, but in other cases it will be very difficult to adopt the same principles. On the one side, we will have to safegaurd the interests of the tenants and on the other, we will have to safeguard the interests of these institutions. How to reconcile these two points of view is also a question to be considered by the members.

Sri H. K. VEERANNA GOWDH.—May I make a suggestion? In the Gundappa Gowda's Committee Report it is recommended that the income of these smaller institutions may be guaranteed to them. While the tenants are made registered occupants of the lands that they are now cultivating, the income from those lands may be guaranteed to the concerned institutions.

Mr. SPEAKER.—I am not concerned with the merits of such questions. But so far as I am concerned, when the Government said that they are for the changes which the House is now prepared to accept, the Government in a few minutes have changed their stand.

Sri KADIDAL MANJAPPA.—I thought over the question ....

Mr. SPEAKER.—Except the Sringeri Jahagir, the Government are now making an amendment to the original statement so to say. About other religious institutions, we will have to seriously consider. Whatever that may be, I leave it to you to consider the question in all aspects, in all seriousness. I require some time, because all of a sudden this is raised. Even now, I feel it is opposed to the principles of the original Bill. That is subject to further study on my part.

Sri L. SIDDAPPA (Channagiri).—The only straight forward way open to the Government is, if they do not feel that they suffer in their prestige, to withdraw the present Bill before the House and to bring forward a fresh Bill.

Sri KADIDAL MANJAPPA.—And prolong the agony of the raiyats!

Sri L. SIDDAPPA.—Soon after the fresh Bill is ready, you can call for

an immediate session of the House. We will consider the new Bill and the House will give its approval to that.

Mr. SPEAKER.—I am not concerned with that. It is left to them. Anyhow it is agreed now that on the third day this question will be taken up again. They can consider this. They have got two days for them to consider the Bill. This is not final.

We have half an hour more. There are some difficulties in regard to the other Bill, to which I do not like to give expression now. There seem to be three or four members anxious to speak on this Inam Abolition Bill. Let them speak.

4-30 P.M.

ಶ್ರೀ ಜಿ. ಪಟ್ಟಸ್ವಾಮಿ (ಚಿಕ್ಕಮಗಳೂರು, ಮೂಡಿಗೆರೆ–ಅನುಸೂಚಿತ ಜಾತಿಗಳು).—ಮಾನ್ಯ ಸಭಾಪತಿಗಳೆ, ಮಾನ್ಯ ರೆವೆನ್ಯೂ ಸಚಿವರು ನಮ್ಮ ಮುಂದಿಟ್ಟಿರತಕ್ಕ ಈ ಇನಾಂ ರದ್ದಿಯಾತಿ ಮಸೂದಾ ಕಾನೂನನ್ನು ಅನೇಕರು ಸ್ವಾಗತಿಸಿದ್ದಾರೆ. ಬಹುಮಟ್ಟಿಗೆ ಈಗಾಗಲೇ ಇದರಲ್ಲಿರತಕ್ಕ ಸಾಧಕಬಾಧಕಗಳನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಇದು ಬಹು ಮುಖ್ಯವಾದ ಒಂದು ಕಾನೂನು ಭಾಗವೆಂಬುದನ್ನು ನಿವೇದಿಸಿದ್ದಾರೆ. ಇದುವರೆಗೆ ಎಲ್ಲರೂ ಈ ವಿಚಾರದಲ್ಲಿ ಚರ್ಚೆಮಾಡಿ ತಮ್ಮ ಅಭಿಪ್ರಾಯವನ್ನೂ, ಅಮೂಲ್ಯವಾದ ಸಲಹೆಗಳನ್ನೂ ಕೊಟ್ಟಿರುವುದರಿಂದರೂ, ಈ ಬಿಲ್ಲು ಕೆಲವು ಬದಲಾವಣೆಗಳಿಗಾಗಿ ಸೆಲೆಕ್ಟ್ ಕಮಿಟಿಗೆ ಹೋಗರೇಬೇಕಾಗಿರುವುದರಿಂದಲೂ ಈ ವಿಷಯದಲ್ಲಿ ಹೆಚ್ಚು ಹೇಳಲು ನಾನು ಇಷ್ಟಪಡುವುದಿಲ್ಲ. ಆದರೆ ಕೆಲವು ವಿಚಾರಗಳನ್ನು ಮಾತ್ರ ಸಭೆಯ ಮುಂದೆ ಹೇಳುವುದು ಅನಿವಾರ್ಯವಾಗಿದೆ.

ಸ್ವಾಮಿ, ನಮ್ಮ ಮಾನ್ಯ ರೆವೆನ್ಯೂ ಸಚಿವರು ಒಬ್ಬ ರೈತರಾಗಿದ್ದಾರೆ. ಅವರು ರೈತಬಾಂಧವರಾಗಿ ರೈತರ ಹಿತಕ್ಕಾಗಿ, ಅವರ ಸುಖಕ್ಕಾಗಿ ದುಡಿದು ಹಿಂದಿನ ಶಾಸನ ಸಭೆಗಳಲ್ಲಿಯೂ ರೈತರ ಅಭಿವೃದ್ಧಿಗಾಗಿ ಬಹಳಮಟ್ಟಿಗೆ ಸಲಹೆಗಳನ್ನು ಮಾಡಿದ್ದಾರೆ. ಹಿಂದಿನ ಸರ್ಕಾರದವರು ಮಾಡಿದ್ದ ಇನಾಂ ರದ್ದಿಯಾತಿ ಮಸೂದಾಕಾನೂನಿನ ಕೆಲವುಭಾಗಗಳನ್ನು ಬದಲಾವಣೆಮಾಡಿ ಈ ಹೊತ್ತಿನ ದಿವಸ ನಮ್ಮ ಮುಂದಿಟ್ಟಿದ್ದಾರೆ. ಎಲ್ಲ ಸದಸ್ಯರೂ ಏನು ಅಪೇಕ್ಷೆ ಮಾಡುತ್ತಿದ್ದಾರೋ ಆ ಅಪೇಕ್ಷೆಗೇ ತಕ್ಕಂತೆ, ಅವರು ನಿರೀಕ್ಷಿಸಿದ ಮಟ್ಟದಲ್ಲಿ ಈ ಕಾನೂನನ್ನು ಬದಲಾಯಿಸುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಆದರೆ ಕೆಲವು ಸದಸ್ಯರು ಅಪೇಕ್ಷಿಸುವಂತೆ ಈಗಲೇ ಈ ಬಿಲ್ಲು ತಯಾರಾದಲ್ಲಿ ಎಷ್ಟರ ಮಟ್ಟಿಗೆ ಜಾರಿಯಾಗಬಹುದು, ಇದರಲ್ಲಿ ಏನು ಸಾಧಕಬಾಧಕಗಳಿವೆ, ಮುಂದೆ ಉಂಟಾಗಬಹುದಾದ ವಾದವಿವಾದಗಳೇನು ಎಂಬುದನ್ನೆಲ್ಲಾ ತುಲನ ಮಾಡಿ, ಇನಾಂದಾರರಿಗೂ, ಗೇಣೀದಾರರಿಗೂ ಇರತಕ್ಕ ಸಂಬಂಧವೇನು ಎಂಬುದನ್ನೆಲ್ಲಾ ಯೋಚನೆ ಮಾಡಿದ್ದಾರೆ. ಇದರಲ್ಲಿ ಬಹಳ ಮಟ್ಟಿಗೆ ತೊಂದರೆಯಿದೆ ಎಂಬುದನ್ನರಿತು ಗೇಣೀದಾರರಿಗಿರುವ ಕಿರುಳುಳವನ್ನು ತಪ್ಪಿಸುವುದಕ್ಕೂ ಇನಾಂದಾರರಿಗೆ ಹೆಚ್ಚು ಅನಾನುಕೂಲವಾಗದಂತೆ ಅವರ ಹಿತದೃಷ್ಟಿಯಿಂದಲೂ, ಜಮೀನು ವ್ಯವಸಾಯದ ಅಭಿವೃದ್ಧಿಯ ದೃಷ್ಟಿಯಿಂದಲೂ, ಈ ಹಿಂದೆ ತಯಾರಿಸಿದ ಮಸೂದಾಕಾನೂನನ್ನು ಸ್ವಲ್ಪಬದಲಾಯಿಸುವುದು ಅನಿವಾರ್ಯವೆಂದು ತಿಳಿದು ಸ್ವಲ್ಪ ಬದಲಾವಣೆ ಮಾಡಿ ಈ ಮಾನ್ಯ ಸಭೆಯ ಮುಂದಿಟ್ಟಿದ್ದಾರೆ. ಈ ಎಲ್ಲ ವಿಚಾರಗಳಲ್ಲಿಯೂ ನಾವು ಎಷ್ಟರಮಟ್ಟಿಗೆ ಬಯಸುತ್ತಿದ್ದೇವೋ ಅಷ್ಟರಮಟ್ಟಿಗೆ ಈ ಕಾನೂನನ್ನು ರಚಿಸಿ ಯಾವ ಅಡ್ಡಿ ಆತಂಕಗಳೂ ಇಲ್ಲದಂತೆ ಜಾರಿಯಾಗುವುದಾದರೆ ಅವರು ಬಹಳಸಂತೋಷಪಡುತ್ತಾರೆಂದು ಹೇಳುವವರಲ್ಲಿ ನಾನೊಬ್ಬ. ಬಹುಶಃ ಇದು ಯಶಸ್ವಿಯಾಗಿ ಜಾರಿಯಾದರೆ ಅವರಹಾಗೆ ಸಂತೋಷಪಡುವವರೂ ಯಾರೂ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸದಸ್ಯರನೇಕರು ಮಸೂದೆಯನ್ನು ಸ್ವಾಗತಿಸಿ ಮಾತನಾಡಿರುವುದರಿಂದ, ಭಿನ್ನಾಭಿಪ್ರಾಯವಿಲ್ಲವೆಂದು ತೋರುತ್ತದೆ. ಆದರೆ ಕೆಲವು ಬದಲಾವಣೆಗಳಾಗಬೇಕೆಂದು ಒಪ್ಪಿದ್ದಾರೆ. ಅದರಂತೆ ಸೆಲೆಕ್ಟ್ ಕಮಿಟಿಗೆ ಈ ಬಿಲ್ಲು ಹೋಗುವುದಾಗಿದೆ. ಸೆಲೆಕ್ಟ್ ಕಮಿಟಿಯವರೂ ಕೂಡ ಇನಾಂದಾರರ ಮತ್ತು ಗೇಣೀದಾರರ ಹಿತ ದೃಷ್ಟಿಯನ್ನೂ ಮತ್ತು ವ್ಯವಸಾಯದ ಹಿತ ದೃಷ್ಟಿಯನ್ನೂ ಗಮನದಲ್ಲಿಟ್ಟುಕೊಂಡು ಸೂಕ್ತ ಬದಲಾವಣೆಗಳನ್ನು ಮಾಡುತ್ತಾರೆಂದು ನಂಬಿದ್ದೇನೆ. ಜಮೀನು ಸಮಸ್ಯೆ ಬಹಳ ದೊಡ್ಡ ಸಮಸ್ಯೆ; ಅದರ ವಿಚಾರದಲ್ಲಿ ಕೂಲಂಕಷವಾಗಿ ಆಲೋಚನೆ ಮಾಡತಕ್ಕದ್ದು ಬಹಳ ಅವಶ್ಯಕ. ನಮ್ಮ ದೇಶದಲ್ಲಿ ಸುಮಾರು 2,300 ಇನಾಂ ಗ್ರಾಮಗಳಿವೆ. ಈ ಇನಾಂ ಗ್ರಾಮಗಳಪೈಕಿ ಸುಮಾರು 600 ಗ್ರಾಮಗಳಲ್ಲಿ ಮಾತ್ರ ಸರ್ವೆ ಸೆಟ್ಲ್‌ಮೆಂಟ್ ಆಗಿದೆ. ಬಾಕಿ ಗ್ರಾಮಗಳಲ್ಲಿ ಸರ್ವೆ ಸೆಟ್ಲ್‌ಮೆಂಟ್ ಅಗಿಲ್ಲ. ಹೀಗೆ ಆಗಿರದೇ ಇರತಕ್ಕ ಗ್ರಾಮಗಳಲ್ಲಿ ಸಾಗುವಳಿದಾರರಿಗೆ ಆಗುತ್ತಿರುವ ಕಿರುಕುಳ ಎಷ್ಟು ಹೇಳಿದರೂ ತೀರದು. ರೈತರು ಎಷ್ಟುಮಟ್ಟಿಗೆ ಜಮೀನ್ದಾರರಿಂದ ಕಿರುಕುಳ ಹೊಂದುತ್ತಿದ್ದಾರೆ, ಜಮೀನ್ದಾರರು ಎಷ್ಟರಮಟ್ಟಿಗೆ ರೈತರಮೇಲೆ ದಬ್ಬಾಳಿಕೆ ನಡೆಸಿಕೊಂಡು ಬರುತ್ತಿದ್ದಾರೆಂಬುದನ್ನೂ ರೈತರು ಎಷ್ಟು ಶೋಷಣೆಗೊಳಗಾಗಿದ್ದಾರೆಂಬ ಚಿತ್ರವನ್ನೂ ಈ ಮಾನ್ಯ ಸಭೆಯಮುಂದಿಡಲು ನಾನು ತಯಾರಾಗಿಲ್ಲ. ಅವರ ಸ್ಥಿತಿ ಬಹಳ ಚಿಂತಾಜನಕವಾಗಿದೆಯೆಂದರೆ ತಪ್ಪಾಗಲಾರದು. ಈಗಾಗಲೇ ಇನಾಂ ಗ್ರಾಮಗಳ ರೈತರ ಕುಂದುಕೊರತೆಗಳನ್ನು ಸಭೆಯಮುಂದೆ ಅನೇಕ ಮಹನೀಯರು ತಿಳಿಸಿದ್ದಾರೆ. ಅದರಲ್ಲಿಯೂ ಮಲೆನಾಡಿನಲ್ಲಿರುವ ಇನಾಂ ಗ್ರಾಮಗಳ ಪರಿಸ್ಥಿತಿ ಬಹಳ ಕಷ್ಟವಾಗಿದೆ. ಅದರ ರೀತಿಯೇ ಬೇರೆ. ಅಲ್ಲಿ ಕಾಡು ವಿಪರೀತವಾಗಿರುವುದರಿಂದ ಕಾಡಿನ ಮಧ್ಯೆ ಒಂದೊಂದು ಗ್ರಾಮವಿರುತ್ತದೆ. ಸುಮಾರು ಹದಿನೈದು ಮೈಲಿ ಫಾಸಲೆಗೊಂದು ಪೋಲೀಸ್ ಸ್ಟೇಷನ್ ಕೂಡ ಇರುವುದಿಲ್ಲ. ಈ ಮಧ್ಯೆ ಇರುವ ಇನಾಂ ಗ್ರಾಮಗಳಲ್ಲಿ ಇನಾಂದಾರರು ರೈತರಿಗೆ ಕೊಡುವ ಕಿರುಕುಳ, ಅವರ ಮೇಲೆ ನಡೆಸುವ ದಬ್ಬಾಳಿಕೆಯನ್ನು ಹೇಳತೀರದು. ಸರ್ಕಸ್‌ನಲ್ಲಿರತಕ್ಕ ಮೃಗಗಳು ರಿಂಗ್ ಮಾಸ್ಟರ್‌ನ ಅಧೀನದಲ್ಲಿ ಯಾವರೀತಿ ಇರುತ್ತವೆಯೋ ಅದೇರೀತಿ ಆ ರೈತರು ಅವರ ಕೈಕೆಳಗಿದ್ದುಕೊಂಡು ಬಹಳಹೀನ ಸ್ಥಿತಿಯಲ್ಲಿದ್ದು ಆ ಇನಾಂದಾರರು ಹೇಳಿದ ಹಾಗೆ ಕೇಳಿಕೊಂಡು ಮೃಗಗಳಹಾಗೆ ಜೀವನವನ್ನು ನಡೆಸುತ್ತಿದ್ದಾರೆ. ಅವರು ಸ್ವತಂತ್ರ ಜೀವನವನ್ನು ಕಳೆದುಕೊಂಡಿರುತ್ತಾರೆ. ವಿದ್ಯಾಭ್ಯಾಸಕ್ಕೆ ಅವರಿಗೆ ಅವಕಾಶವಿಲ್ಲ. ಯಾವ ಕೆಲಸವನ್ನೂ ಸ್ವತಂತ್ರ

(ಶ್ರೀ ಕೆ. ಪುಟ್ಟಸ್ವಾಮಿ.)

ವಾಗಿ ಮಾಡಲು ಅವರಿಗೆ ಸ್ವಾತಂತ್ರ್ಯವಿಲ್ಲ. ವಂಶಪಾರಂಪರ್ಯವಾಗಿ ಜಮೀನನ್ನು ಸಾಗುವಳಿ ಮಾಡಿಕೊಂಡು ಬಂದಿದ್ದರೂ ಕೂಡ ಅವರು ಜಮೀನು ಹಕ್ಕುದಾರಿಯನ್ನು ಸ್ಥಾಪಿಸುವುದಕ್ಕೆ ಯಾವ ವಿಧಾನವನ್ನೂ ಯಾವ ರುಜುವಾತನ್ನೂ ಇಟ್ಟುಕೊಂಡಿಲ್ಲ. ಆದುದರಿಂದ ಬಹಳ ಮಟ್ಟಿಗೆ ಜಮೀನಿನ ಹಕ್ಕನ್ನು ಕಳೆದುಕೊಂಡಿರುತ್ತಾರೆ. ಸಾವಿರಾರು ವರ್ಷಗಳಿಂದ ಜಮೀನನ್ನು ಸಾಗುಮಾಡಿಕೊಂಡು ಬಂದಿದ್ದರೂ ಈ ಹೊತ್ತಿನ ದಿವಸ ಅವರಲ್ಲಿ ಯಾವ ಕಾಗದಪತ್ರವೂ ಇಲ್ಲ. ಯಾವರೀತಿ ತಮ್ಮ ಹಕ್ಕನ್ನು ಸ್ಥಿರಪಡಿಸುವುದೆಂಬ ಚಿಂತೆಗೊಳಗಾಗಿ ಸಾಧ್ಯವಾಗದೆ ಬಹುಮಂದಿ ತಮ್ಮ ಜಮೀನು ಕಳೆದುಕೊಂಡು ಬೀದಿಯ ಭಿಕಾರಿಗಳಿಗಿಂತ ಕಡೆಯಾಗಿದ್ದಾರೆ. ಈಗಾಗಲೇ ಅನೇಕ ಗ್ರಾಮಗಳಲ್ಲಿ ಜಮೀನನ್ನು ಇನಾಂದಾರರು ಮಾರಾಟಮಾಡಿಕೊಂಡು ಪರಗ್ರಾಮಗಳಿಗೆ ಹೋಗಿ ನೆಲಸಿದ್ದಾರೆ. ಆ ಗ್ರಾಮಗಳಲ್ಲಿರುವ ಜೋಡಿದಾರರು ಸರ್ಕಾರದವರು ಗ್ರಾಮಗಳನ್ನೂ ಅಭಿವೃದ್ಧಿಮಾಡಲು ಅವಕಾಶ ಕೊಟ್ಟಿಲ್ಲ. ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ ಈಗಾಗಲೇ ಕೆಲವು ವರ್ಷಗಳ ಹಿಂದೆ ಇನಾಂದಾರರ ಕಿರುಕುಳವನ್ನು ತಡೆಯಲಾರದೆ ರೈತರು ಸಾರ್ವಜನಿಕರ ಮತ್ತು ಸರ್ಕಾರದವರ ಗಮನಕ್ಕೆ ತಮ್ಮ ಕಷ್ಟವನ್ನು ತೆಗೆದುಕೊಂಡು ಬಂದರೂ ಆ ಕಾಲದಲ್ಲಿ ಸರ್ಕಾರದವರು ಅವರ ಸಹಾಯಕ್ಕೆ ಹೋಗಲಾರದೆ ಸಾರ್ವಜನಿಕ ಕೆಲವು ಮಹಾನಾಯಕರು ಸೇರಿ ಆ ವಿವಾದಗಳನ್ನು ರಾಜಿಯಿಂದ ಪರಿಹಾರ ಮಾಡಿದ್ದಾರೆ. ಚಿಕ್ಕಮಗಳೂರು ತಾಲೂಕು ಅಂಬಳೆ ಹೋಬಳಿಯ ಜೋಡಿ ಬೂದಣಿಕೆ ಗ್ರಾಮದಲ್ಲಿ ಕೆಲವು ರೈತರು ಜಮೀನ್ದಾರರ ಕಿರುಕುಳವನ್ನು ತಾಳಲಾರದೆ ಆ ಊರನ್ನೇ ಬಿಟ್ಟು ಪರಗ್ರಾಮಕ್ಕೆ ಬಂದು ನೆಲಸಬೇಕೆಂದು ಮನಸ್ಸು ಮಾಡಿದ್ದಾರೆ. ಈ ಸಾಗುವಳಿದಾರರು ಪರಗ್ರಾಮಕ್ಕೆ ಹೋಗಲು ಇನಾಂದಾರರು ಬಿಡುತ್ತಿಲ್ಲ. ಹೀಗೆ ಈ ಜಮೀನು ಸಾಗುವಳಿದಾರರು ಅನುಭವಿಸುತ್ತಿರುವ ಕಿರುಕುಳವನ್ನು ಎಷ್ಟು ಹೇಳಿದರೂ ತೀರದು. ಈ ಜನರಿಗಿರುವ ಕುಂದುಕೊರತೆಗಳನ್ನು ಕಿರುಕುಳಗಳನ್ನು ತಪ್ಪಿಸುವುದಕ್ಕೂ ವ್ಯವಸಾಯದ ಅಭಿವೃದ್ಧಿಗೂ ಸರ್ಕಾರದವರು ಮನಸ್ಸುಮಾಡಿ ಈ ರೀತಿ ಒಂದು ಬಿಲ್ಲನ್ನು ತಂದಿದ್ದಾರೆ. ಈಗ್ಗಾಗಲೇ ಮಾನ್ಯಸದಸ್ಯರು ಸಲಹೆ ಮಾಡಿರುವಂತೆ ಈ ಎಲ್ಲಾ ದೃಷ್ಟಿಯನ್ನೂ ಸೆಲೆಕ್ಟ್ ಕಮಿಟಿಯವರು ಕೂಲಂಕಷವಾಗಿ ಪರಿಶೀಲಿಸುತ್ತಾರಾಗಿ ನಂಬಿರುತ್ತೇನೆ.

ಈ ಎಲ್ಲಾ ದೃಷ್ಟಿಗಳಿಂದಲೂ ಆದಷ್ಟುಮಟ್ಟಿಗೆ ಕೂಲಂಕಷವಾಗಿ ವಿಷಯಗಳನ್ನೆಲ್ಲಾ ಚೆನ್ನಾಗಿ ಪರಿಶೀಲನೆ ಮಾಡಿದನಂತರವೇ ಈ ಮಸೂದೆಯನ್ನು ಸಭೆಯ ಮುಂದೆ ತಂದಿರಬಹುದು. ಆದರೆ ಈಗಾಗಲೇ ಮಾನ್ಯ ಮಂತ್ರಿಗಳು ತಿಳಿಸಿರುವಂತೆ ಇದರಲ್ಲಿ ಅಲ್ಲಲ್ಲೇ ಇರತಕ್ಕ ಅಲ್ಪ ಸ್ವಲ್ಪ ನ್ಯೂನತೆಗಳನ್ನು, ಈ ಮಸೂದೆಯನ್ನು ಮತ್ತೊಮ್ಮೆ ಈ ಸಭೆಯ ಮುಂದೆ ತರುವುದರೊಳಗೆ ಸೆಲೆಕ್ಟ್ ಸಮಿತಿಯವರು ಪರಿಶೀಲನೆ ಮಾಡಿ ಸರಿಪಡಿಸಲು ಒಂದು ಅವಕಾಶವಿದೆ. ಈಗಾಗಲೇ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು ಹಲವಾರು ದೋಷಗಳನ್ನೂ ಸೂಚಿಸಿದ್ದಾರೆ. ಅವುಗಳನ್ನು ಬದಲಾವಣೆ ಮಾಡುವುದು ಅವಶ್ಯಕವೆಂದು ತೋರುತ್ತದೆ.

ಇನ್ನು ಇನಾಂದಾರರುಗಳಿಗೆ ಕೊಡತಕ್ಕ ಪರಿಹಾರದ ಬಗ್ಗೆ ರಾಜ್ಯಾಂಗ ನಿಯಮಗಳಲ್ಲಿ ಕೂಡ ಹಾಗೆ ಒಂದು ಪರಿಹಾರ ಕೊಟ್ಟೇಕೊಡಬೇಕೆಂದು ಹೇಳಿದೆ. ಅದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಆದಾಗ್ಗೂ ಈ ಬಿಲ್ಲಿನಲ್ಲಿ ನಮೂದಿಸಿರುವಷ್ಟು ಪರಿಹಾರವನ್ನು ಕೊಡುವುದು ಸೂಕ್ತವಲ್ಲವೆಂದು ನಾನು ಹೇಳುತ್ತೇನೆ. ಹಾಗೆ ನಮ್ಮ ರಾಜ್ಯಾಂಗದಲ್ಲಿ ಒಂದು ಪರಿಹಾರವನ್ನು ಕೊಡಬೇಕೆಂದು ಹೇಳದೆ ಇದ್ದಿದ್ದರೆ, ಆಗ ನಾನೂ ಸಹ ಇವರಿಗೆ ಯಾವ ಪರಿಹಾರವನ್ನೂ ಕೊಡಕೂಡದೆಂದೇ ಹೇಳುತ್ತಿದ್ದೆನು. ನಾನೀಗ ಆ ನೂರಾರು ವರ್ಷಗಳ ಹಿಂದೆ ಯಾರು ಆ ಜಮೀನುಗಳನ್ನು ಇವರಿಗೆ ಏತಕ್ಕೋಸ್ಕರವಾಗಿ ಕೊಟ್ಟರು ಎಂಬ ವಿಚಾರಕ್ಕೆ ಪ್ರವೇಶ ಮಾಡುವುದಿಲ್ಲ. ಈ ದಿವಸ ಅನೇಕ ಜಮೀನುಗಳನ್ನು ಯಾವುದೋ ಕಾರಣದ ಮೇಲೆ, ಯಾರದೋ ಆಸ್ತಿಯನ್ನು ಯಾರು ಯಾರೋ ಅನುಭವಿಸಿಕೊಂಡು ಬರುತ್ತಿದ್ದಾರೆ. ಆದಕ್ಕಾಗಿ ಈ ದಿವಸ ಅವರು ಆ ಜಮೀನುಗಳೆಲ್ಲಾ ಹೋಗಿಬಿಡುತ್ತವೆಂದು ಅಷ್ಟು ವ್ಯಸನಪಡುವುದಕ್ಕೆ ಅವಕಾಶವಿಲ್ಲ. ಈಗಿನ ಕಾಲಸ್ಥಿತಿಗನುಸಾರವಾಗಿ ಇನಾಂದಾರರೂ ಸಹ ಅವರ ಆಸ್ತಿಗಳನ್ನು ಸರ್ಕಾರಕ್ಕೆ ಬಿಟ್ಟುಕೊಡುವ ಸಂದರ್ಭದಲ್ಲಿ ಅಲ್ಪಸ್ವಲ್ಪ ಪರಿಹಾರವನ್ನು ತೆಗೆದುಕೊಂಡು ಬಿಟ್ಟುಕೊಡುವುದು ಲೇಸಾಗಿದೆ. ಅಷ್ಟಕ್ಕೇ ಅವರು ತೃಪ್ತಿಪಡಬೇಕು. ಹಾಗೂ ಒಂದು ವೇಳೆ ಅವರು ಬಿಟ್ಟುಕೊಡದೇಹೋದರೆ ಮುಂದೆ ಅದರ ಪರಿಣಾಮ ಏನಾದೀತು ಎಂಬುದನ್ನೂ ಸಹ ಅವರು ಆಲೋಚನೆ ಮಾಡಬೇಕು. ಈ ದಿವಸ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಎಷ್ಟರಮಟ್ಟಿಗೆ ಇಂಥ ವಿಚಾರಗಳಲ್ಲಿ ಬದಲಾವಣೆ ಆಗುತ್ತಿದೆಯೋ ಅದೇ ಮಟ್ಟದಲ್ಲಿ ನಮ್ಮ ದೇಶದಲ್ಲೂ ಬದಲಾವಣೆ ಆಗಬೇಕೆಂದು ಹೇಳುವುದರ ಬಗ್ಗೆ ಅನೇಕರಿಗೆ ಅಸಮಾಧಾನಗಳಿವೆ. ಆದರೆ ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಕೊಂಡು ಹೋಗುವುದಾದರೆ, ಅಂಥ ಕಷ್ಟಗಳೇನೂ ಬರಲಾರವು. ಎಲ್ಲರಿಗೂ ಕಷ್ಟ ಬಂದಿರುವಾಗ ಒಬ್ಬರಿಗೊಬ್ಬರು ಸಹಾನುಭೂತಿ ತೋರಿಸಬೇಕು. ಈ ದಿವಸ ಪ್ರಜಾಪ್ರಭುತ್ವ ತತ್ವಗಳಿಗನುಗುಣವಾಗಿ ಏನೊಂದು ಸನ್ನಿವೇಶ ಎದ್ದಿದೆಯೋ ಅದಕ್ಕನುಗುಣವಾಗಿ ಸರ್ಕಾರದವರು ಈ ಮಸೂದೆಯನ್ನು ತಂದಿದ್ದಾರೆ. ಆದರೆ ಗೇಣಿದಾರರ ವಿಚಾರದಲ್ಲಿ ಒಂದು ಅಂಶ ಈ ಬಿಲ್ಲಿನಲ್ಲಿ ನಮೂದಾಗಿಲ್ಲ. ಈ ಬಿಲ್ಲಿನಲ್ಲಿ ಇನಾಂದಾರರಿಗೆ ಎಷ್ಟು ಜಮೀನನ್ನು ಬಿಟ್ಟುಕೊಡಬೇಕೆಂದು ಒಂದು ಮಿತಿಯನ್ನು ಮಾಡಿದ್ದಾರೋ, ಅದೇ ರೀತಿಯಾಗಿ ಈ ಗೇಣೀದಾರರಿಗೂ ಎಷ್ಟು ಜಮೀನಿರಬೇಕೆಂಬ ಬಗ್ಗೆ ಒಂದು ಮಿತಿಯನ್ನು ಮಾಡಿ ಅಷ್ಟು ಜಮೀನನ್ನು ಅವರಿಗೆ ಬಿಟ್ಟುಕೊಡುವಂತೆ ಮಾಡತಕ್ಕ ಒಂದು ಅಂಶವನ್ನು ಈ ಮಸೂದೆಯಲ್ಲಿ ಸೂಚಿಸಬೇಕೆಂದು ತಿಳಿಸಲಿಚ್ಛಿಸುತ್ತೇನೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಪ್ರತಿಯೊಂದು ಸೆಕ್ಷನ್‌ವಾರ್ ಏನೇನು ಅನುಮಾನವಿರುತ್ತದೆ, ಯಾವ ರೀತಿ ಅದನ್ನು ಸರಿಪಡಿಸಬೇಕೆಂಬ ಬಗ್ಗೆ ವಿವರವಾಗಿ ತಿಳಿಸಿರುವುದರಿಂದ ಪುನಃ ನಾನೂ ಸಹ ಅದೇ ವಿಚಾರಗಳನ್ನು ಪ್ರಸ್ತಾಪ ಮಾಡುತ್ತ ಈ ಮಾನ್ಯ ಸಭೆಯ ಕಾಲವನ್ನು ಹರಣ ಮಾಡತಕ್ಕ ಇಚ್ಛೆ ನನಗೆ ಇರುವುದಿಲ್ಲ. ಆದರೆ ಇಷ್ಟು ಮಾತ್ರ ಹೇಳಬಯಸುತ್ತೇನೆ. ಈ ಮಸೂದೆ ಇನ್ನೂ ಸೆಲೆಕ್ಟ್ ಸಮಿತಿಯ ಮುಂದೆ ಹೋಗತಕ್ಕ ಅವಕಾಶವಿದೆ. ಅಲ್ಲಿ ಅನೇಕ ವಿಚಾರಗಳನ್ನು ಕೂಲಂಕಷವಾಗಿ ಪರಿಶೀಲನೆ ನಡೆಸಿ ಬದಲಾಯಿಸತಕ್ಕ ಸಂದರ್ಭವೂ ಇದೆ. ಹಾಗೆ ಅವರು ಮಾಡತಕ್ಕ ಬದಲಾವಣೆಗಳನ್ನೆಲ್ಲಾ ಮೂಲಭೂತ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ಬದಲಾವಣೆ ಮಾಡಬೇಕಾಗಿರುತ್ತದೆ.

ಅಂಥ ಬದಲಾವಣೆಗೆ ಮಾತ್ರ ಅವಕಾಶವಿದೆ ಕೆಲವು ಅಮೂಲ್ಯವಾದಂಥ ವಿಷಯಗಳನ್ನು ಸದಸ್ಯರು ಸೂಚಿಸಿದ್ದಾರೆ. ಈ ಎಲ್ಲ ಅಂಶಗಳನ್ನೂ ಆ ಸೆಲೆಕ್ಟ್ ಸಮಿತಿಯ ಸದಸ್ಯರು ಗಮನದಲ್ಲಿಟ್ಟುಕೊಂಡು ಎಲ್ಲ ಸಾಧಕ ಬಾಧಕಗಳನ್ನೂ ಕೂಲಂಕಷವಾಗಿ ವಿನಿಮಯ ಮಾಡಿಕೊಂಡು, ಚೆನ್ನಾಗಿ ಪರಿಶೀಲನೆ ಮಾಡಿ, ಇನಾಂದಾರರಿಗೂ ಮತ್ತು ಗೇಣಿದಾರರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಮಸೂದೆಯನ್ನು ಬೇಗ ತಯಾರಿಸಿ ಈ ಸಭೆಯ ಮುಂದೆ ತರಬೇಕೆಂದು ಹೇಳಿ ನನಗೆ ಮಾತನಾಡಲು ಇಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೆ, ಈಗ ಸಭೆಯ ಮುಂದೆ ಬಹಳ ದೀರ್ಘವಾಗಿ 2-3 ದಿವಸಗಳಿಂದ ಚರ್ಚೆಯಾಗುತ್ತಿರುವ ಈ ಮಸೂದೆಯ ಪರವಾಗಿ ನಾನು ಏನೇನು ವಿಷಯಗಳನ್ನು..................

ಅಧ್ಯಕ್ಷರು.—ಈ ವಿಚಾರವಾಗಿ ತಾವು ಈಗಾಗಲೇ ಮಾತನಾಡಿದ್ದೀರಾ ?

ಶ್ರೀ ಕೆ. ಪ್ರಭಾಕರ್.—ಹೌದು ; ಮಾತನಾಡಿದ್ದೇನೆ ಒಂದಾವರ್ತಿ.

ಅಧ್ಯಕ್ಷರು.—ಹಾಗಾದರೆ ಕುಳಿತುಕೊಳ್ಳಿ. ತಾವು ಮತ್ತೊಮ್ಮೆ ಇದೇ ವಿಷಯದ ಮೇಲೆ ಮಾತನಾಡುವುದು ಸಂಪ್ರದಾಯಕ್ಕೆ ವಿರೋಧ. This creates a precedent. That is my difficulty.

Tomorrow and the day after tomorrow we have non-official business—Resolutions.

The House will now rise for the day and meet tomorrow to 12 NOON.

The House adjourned at Fifty Minutes past Four of the Clock to meet again at Twelve of the Clock, on Tuesday, 7th April 1953.

N54-9-15-28

WD 4516—GPB—500—20-1-54